ಸೇರಿದವರು ಎಂದು ತನಿಖೆಯಲ್ಲಿ ಕಂಡು ಬಂದಿದೆ. ನಿಗದಿದಾರರ ಸರಿಯಾದ ವಿಳಾಸ ಮತ್ತು ವರಮಾನ ಮತ್ತು ಇನ್ನಿತರ ವಿತರಣೆಗಳು ಇಲ್ಲವೆಂದು ತನಿಖೆಯಿಂದ ಬಂದಿದೆ. ಆದರೂ ಅವರುಗಳ ಪೈಕಿ, 192 ಫಲಾನುಭವಿಗಳು ಹೂಡಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳ ಹಂಚಿಕೆಯು, ನಿಶ್ಚಯಿಸಿದ ನಿಯಮಗಳ ಪ್ರಕಾರ, ಒಬ್ಬ ಫಲಾನುಭವಿಯು ಒಂದು ವರ್ಷಕ್ಕೆ 8,400 ರೂಪಾಯಿಗಿಂತ ಕಡಿಮೆ ಆದಾಯವನ್ನು ಹೊಂದಿರತಕ್ಕದ್ದು. ಈ ಫಲಾನುಭವಿ ಅಂಗವಿಕಲರ ಬಗ್ಗೆ, ಆದಾಯಕ್ಕೆ ಸಂಬಂಧಪಟ್ಟಂತೆ ಸರಿಯಾದ ದಾಖಲೆಗಳು ಇಲ್ಲ. ಈ ವಿವರಗಳನ್ನು ಪರಿಶೀಲನೆ ಮಾಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ ಅನೇಕ ಕ್ಷೇತ್ರಗಳಿವೆ. ಅದೇ ರೀತಿ ಮಂಗಳೂರು ಇದೆ, ಹುಬ್ಬಳ್ಳಿ ಇದೆ, ಬೆಳಗಾಂ ಇದೆ. ಇಂತಹ ಪ್ರಮುಖ ನಗರಗಳಲ್ಲಿ ಭೂಮಿ ಬಹಳ ಬೆಲೆ ಬಾಳುತ್ತದೆ. ಇಲ್ಲಿ ಮುಖ್ಯವಾಗಿ ಉತ್ತರಹಳ್ಳಿ ಮತ್ತು ವರ್ತೂರು ಈ ಎರಡು ಕ್ಷೇತ್ರಗಳಲ್ಲಿ ಭೂಮಿ ಇದೆ. ಉಳಿದ ಶಾಸಕರ ಕ್ಷೇತ್ರಗಳಲ್ಲಿ ಭೂಮಿ ಆದರೆ ಬಡವರು ಇದ್ದಾರೆ, ಅರ್ಹತೆವುಳ್ಳವರು ಇದ್ದಾರೆ. ಇದರಲ್ಲಿ ಹೆಚ್ಚಾಗಿ, ಏನಾಗುತ್ತದೆಂದರೆ, ಈ ಭಾಗದ ಜನರೂ ಕೂಡ ಅಲ್ಲಿ ಹಾಕುತ್ತಾರೆ. ಆದರೆ, ನಮ್ಮ ಆಶ್ರಯ ಯೋಜನೆಯ ನಿಯಮಾವಳಿಯಲ್ಲಿ ಏನಿದೆ ಎಂದರೆ, ಆ ಗ್ರಾಮದವರಿಗೇ ಕೊಡಬೇಕು ಅಥವಾ ಆ ಕ್ಷೇತ್ರದವರಿಗೆ ಕೊಡಬೇಕು. ಅಲ್ಲಿ, ಇವರು ಇಲ್ಲದಿದ್ದರೂ ನೆರೆ ಗ್ರಾಮಕ್ಕೆ ಕೊಡಬೇಕೆಂದು ನಮ್ಮ ಆಶ್ರಯದಲ್ಲಿರತಕ್ಕಂತಾದ್ದು. ಆ ದೃಷ್ಟಿಯಿಂದ ನೋಡಿದರೆ, ವರ್ತೂರು ಮತ್ತು ಉತ್ತರ ಹಳ್ಳಿ ಕ್ಷೇತ್ರದ ಜನರಿಗೆ ಕೊಡಬಹುದೇ ಹೊರತು, ಬೆಂಗಳೂರಿನ ಉಳಿದ ಭಾಗಗಳ ಶಾಸಕರ ಕ್ಷೇತ್ರದವರಿಗೆ ಈ ಭೂಮಿಯನ್ನು ಕೊಡುವುದಕ್ಕಾಗುವುದಿಲ್ಲ. ಒಂದು ವೇಳೆ ಕೊಡಬೇಕಾದರೆ ಸರ್ಕಾರದಿಂದ ಆಶ್ರಯದ ಮಾರ್ಗಸೂಚಿಗೆ ವಿನಾಯಿತಿ ಬೇಕು. ವರ್ತೂರಿನಲ್ಲಿ, ಆ ಕ್ಷೇತ್ರದಲ್ಲಿ ಇದು ಕೊಡುವುದಕ್ಕೆ ಸರ್ಕಾರದಿಂದ ರಿಲ್ಯಾಕ್ಸೇಷನ್ ಕೊಡಬೇಕು. ಇದೊಂದು ತಾಂತ್ರಿಕ ದೋಷ ಇದೆ. ಈ ತಾಂತ್ರಿಕ ದೊಷದಿಂದ, ಅಲ್ಲಿ ಕೊಟ್ಟಿದ್ದು ಮಾರ್ಗಸೂಚಿ ಪ್ರಕಾರ ಪ್ರಕಾರ ಕ್ರಮವಾಗಿಲ್ಲ. ಆದರೆ, ಇದೊಂದು ದೊಡ್ಡ ಕಾಂಟ್ರವರ್ಸಿಯಾಗಿ, ವಿವಾದಾಸ್ಪದ ವಿಚಾರವಾಗಿ ನಮ್ಮ ಮುಂದೆ ಬಂದಿದೆ. ಈ ಸಮಸ್ಯೆ ಬೇರೆ ಕ್ಷೇತ್ರದಲ್ಲಿ ಕೂಡ ಬರಬಹುದು. ಆದರೆ ಇದು ಮಾರ್ಗಸೂಚಿ ಪ್ರಕಾರ ಸರಿಯಾಗಿಲ್ಲ. ತಾಂತ್ರಿಕ ಕಾರಣದಿಂದ ನಾವು ಇವತ್ತು ಇದರ ಮೇಲೆ ಬೇರೆಬೇರೆ ರೀತಿಯಲ್ಲಿ ಮಾಲಫೈಡ್ ಮಾಡತಕ್ಕಂಥಾದ್ದು. ಮತ್ತೊಂದು ಇನ್ನೊಂದು ಸರಿಯಲ್ಲ. ಇದು ಹೇಗೆ ಬಂತು ಅಂದರೆ, ನಿಶಾಸ್ ಎನ್ನುವ ಸಂಸ್ಥೆ ಎಂದು ಹೇಳಿ ಅವರು ಒಂದು ಕಡೆ ಈ ಆಶ್ರಯದಲ್ಲಿ ನಿಮಗೆ ಸೈಟ್ ನಿವೇಶನ ಬೇಕಾದರೆ ನಮಗೆ ಅರ್ಜಿಹಾಕಿ ಎಂದು. ಪ್ರಕಟಣೆ ಕೊಟ್ಟರು ಆದ್ದರಿಂದ ಇಂತಹ ಒಂದು ರೀತಿಯಲ್ಲಿ ಜನಗಳಿಗೆ ಸಂಶಯ ಬಂತು. ಇವರು ಮಾಡಿಕೊಳ್ಳುವುದಕ್ಕೆ ಇದನ್ನು ಮಾಡುತ್ತಿದ್ದಾರೆ ಅಂತ ಹೇಳಿ ಒಂದು ರೀತಿಯಲ್ಲಿ ಸಂಶಯ ಆಗಿದೆ. ಆದರೆ ಈ ನಿಶಾಸ್ ಸಂಸ್ಥೆಯವರಿಗೂ ಮತ್ತು ಈ ಟಾಸ್ಕ್ ಫೋರ್ಸ್ ಕಮಿಟಿಯವರಿಗೂ ನಿವೇಶನ ವಿತರಣೆ ಮಾಡಲಿಕ್ಕೆ ಅವರಿಗೂ ಇವರಿಗೂ ಯಾವುದೇ ರೀತಿಯ ಸಂಬಂಧ ನಮ್ಮ ವರದಿ ಪ್ರಕಾರ ಇಲ್ಲಿ ಬಂದಿಲ್ಲ ಮತ್ತು ಇದರ ಬಗ್ಗೆ ಈ ಸೈಟನ್ನು ಹಣವನ್ನು ತೆಗೆದುಕೊಂಡು ಯಾರಾದರೂ ಕೊಟ್ಟಿದ್ದಾರೆ ಎಂಬುದರ ಪುರಾವೆಗಳು ಕೂಡ

ನಮ್ಮಲ್ಲಿ ಇಲ್ಲ. ಆದರೂ ಕೂಡ ಇದು ಒಂದು ಸಂಶಯಾತೀತವಾಗಿ ಮತ್ತು ಜನಗಳಲ್ಲಿ ಗೊಂದಲ ಬೇಕಾಗಿಲ್ಲ. ಏಕೆಂದರೆ ಇಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರು ನಮ್ಮನ್ನು ಎಬ್ಬಿಸಿ ಕೊಟ್ಟರು ಅಂತ ಒಂದು ವಾದ ಇದೆ. ಮತ್ತೊಂದು ಇಂಡಸ್ಟ್ರೀಯಲಿ ಎಕ್ಸಪೋರ್ಟ್‌ಗೆ ಆ ಜೋನ್‌ಗೆ ಮಾಸಲಾಗಿಟ್ಟಂತಹ ಭೂಮಿಯನ್ನು ಆಶ್ರಯಗೆ ಕೊಟ್ಟಿದ್ದಾರೆ ಅಂತ ಹೇಳಿ ಮತ್ತೊಂದು ವಿಚಾರ. ಹೀಗೆ ಇದು ಅನೇಕ ರೀತಿಯಲ್ಲಿ ಗೊಂದಲದ ವಾತಾವರಣ ಇತ್ತು, ಅದನ್ನು ನಾವು ನಿರ್ಮಲವಾಗಿಸಬೇಕು ಮತ್ತು ಇದರ ಬಗ್ಗೆ ಯಾರಿಗೂ ಸಂಶಯ ಬರಬಾರದು ಎಂಬ ಏಕೈಕ ಉದ್ದೇಶದಿಂದ ಹೂಡಿ ಗ್ರಾಮದ ಅರ್ಹ ವ್ಯಕ್ತಿಗಳಿಗೆ ಸೂಕ್ತ ನಿವೇಶನಗಳನ್ನು ಕೊಡಬೇಕೆಂಬುದು ಒಂದು ವಿಚಾರ. ಈ ಯೋಜನೆಯಲ್ಲಿ ಹಂಚಿಕೆ ಮಾಡಲಿಕ್ಕೆ ತಾಂತ್ರಿಕ ದೋಷ ಕೂಡ ಇರುವುದರಿಂದ ನಾವು ಏನು ಮಾಡಿದ್ದೇವೆ ಅಂದರೆ ಈ ಎಲ್ಲಾ ಅಲಾಟ್‌ಮೆಂಟ್ಸ್ ಸರ್ವೆ ನಂಬರು 145-150-152 ಏನು 70 ಎಕರೆಭೂಮಿಯಲ್ಲಿ 1383 ನಿವೇಶನಗಳನ್ನು ಅಭಿವೃದ್ಧಿಪಡಿಸಿ ಅಲಾಟ್‌ಮೆಂಟ್ ಮಾಡಿದ್ದಾರೆ ಅದನ್ನೆಲ್ಲಾ ರದ್ದು ಮಾಡಬೇಕು ಅಂತ ಹೇಳಿ ಸರ್ಕಾರದಿಂದ ನಿರ್ಣಯ ಮಾಡಿದ್ದೇವೆ. ಇದನ್ನು ರದ್ದು ಮಾಡಿ ಅರ್ಹ ವ್ಯಕ್ತಿಗಳು ಯಾರಿದ್ದಾರೆ, ಈ ಪಟ್ಟಿಯಲ್ಲಿ ಕೂಡ ಇರಬಹುದು, ಮತ್ತೆ ಅಂಗವಿಕಲರು ಎಂದು ಹೇಳಿ ಸುಮಾರು 85 ಮಂದಿ ಇದರಲ್ಲಿ ಬಹಳಷ್ಟು ಜನರು ನಮ್ಮ ಕೃಷ್ಣಾಗೆ ಸಂದರ್ಶನಕ್ಕೆ ಬಂದಿದ್ದರು. ಅದರಲ್ಲಿ ಅಗವಿಕಲರು ಕುರುಡರು ಕಿವುಡರು ಎಲ್ಲರೂ ಒಂದು ನಮಗೆ ಹಕ್ಕು ಪತ್ರ ಕೊಟ್ಟಿದ್ದಾರೆ, ಅಂಗವಿಕಲರು ಯಾರಿಗೋ ಲಂಚ ಕೊಟ್ಟು ಅವರು ಸೈಟ್ ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ನಂಬಲಿಕ್ಕೆ ಸಾಧ್ಯವಾಗುವುದಿಲ್ಲ. ನಾನು ನೋಡಿದೆ. We cannot believe that. You can make an allegation but if you line up and see them I do not think that they can afford to give any money to whatsoever to anyone. ಇದು ಬಹಳಷ್ಟು ಸತ್ಯಕ್ಕೆ ದೂರವಾದಂತಹ ವಿಚಾರವಾಗಿದೆ. ಆದಕಾರಣ ಇದನ್ನು ಸರಿಯಾಗಿ ಪರಿಶೀಲನೆ ಮಾಡುತ್ತೇವೆ. ಎಷ್ಟು ಜನರು ಅಂಗವಿಕಲರು ಇದರಲ್ಲಿ ಇದ್ದಾರೆ ಅಂಗವಿಕಲರು ಅಲ್ಲದೆ ಇದ್ದವರು ಯಾರಿದ್ದಾರೆ ; ಅಂಗವಿಕಲರ ಹೆಸರಿನಲ್ಲಿ ಯಾರ್ಯಾರು ತೆಗೆದುಕೊಂಡಿದ್ದಾರೆ ಎಂಬುದನ್ನೆಲ್ಲಾ ನಾವು ಖಂಡಿತವಾಗಿ ಪರಿಶೀಲನೆ ಮಾಡೋಣ. ಒಂದು ಅಂಗವಿಕಲರಿಗೆ ಸೈಟ್ ಕೊಡುವುದು; ಕುಷ್ಠ ರೋಗಿಗಳನ್ನು ಪುನರ್‌ವಸತಿಗೊಳಿಸುವುದು; ಕುಷ್ಠ ರೋಗಿಗಳು ಕೂಡ ಇದರಲ್ಲಿ ಕೆಲವರು ಇದ್ದಾರೆ. ಇವತ್ತು ಅವರೆಲ್ಲರಿಗೂ ಕೂಡ ನಿವೇತನ ಸರಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ನಿವೇತನ ಸಿಗಬೇಕು. ಒಂದು ವೇಳೆ ಮಾರ್ಗಸೂಚಿಯನ್ನು ಸಡಿಲ ಮಾಡಬೇಕಾದರೆ ಬೆಂಗಳೂರು ನಗರದಲ್ಲಿದ್ದರೂ ಕೂಡ ಅಂಗವಿಕಲರು ನಿಜವಾಗಿ ಅವರ ಆದಾಯ ಕಡಿಮೆ ಇದ್ದರೆ 8400 ರೂಪಾಯಿಗಳಿಗಿಂತ ಒಳಗೆ ಇದ್ದರೆ ನಿಜವಾಗಿಯೂ ಅವರಿಗೆ ಸಿಗಬೇಕು. ಏಕೆಂದರೆ ಈ ಪ್ರಶ್ನೆ ಇಲ್ಲಿ ಬೆಂಗಳೂರು ನಗರದಲ್ಲಿರತಕ್ಕಂಥ ಅನೇಕ ಜನ ಸದಸ್ಯರು ಬಂದು ನಮಗೆ ಹೇಳಿದ್ದಾರೆ. ಇಲ್ಲಿ ನೀವು ಇಬ್ಬರು ಶಾಸಕರಿಗೆ ಮಾತ್ರ ಕೊಡುವುದು ಅಲ್ಲ, ನಮ್ಮ ಬೆಂಗಳೂರು ಮಟ್ಟಿಗೆ ನೀವು ನಮ್ಮ ಎಲ್ಲಾ ಶಾಸಕರನ್ನು ಸೇರಿಸಿ ಒಂದು ಸಮಿತಿ ಮಾಡಬೇಕು, ಆ ಸಮಿತಿ ತನ್ಮೂಲಕ ಎಷ್ಟು ಭೂಮಿ ಇದೆ ಎಂದು ಸರಿಯಾಗಿ ನೋಡಿಕೊಂಡು ಎಲ್ಲರಿಗೂ ಸರಿಸಮನಾಗಿ ಹಂಚತಕ್ಕಂಥ ಪ್ರಯತ್ನ ಮಾಡಬೇಕು ಎಂದು ಅನೇಕರು ಬೆಂಗಳೂರು ನಗರದಿಂದ ಬೇರೆ

ಕ್ಷೇತ್ರಗಳ ಶಾಸಕರು ಬಂದು ಹೇಳಿದ್ದಾರೆ. ಇದರಲ್ಲಿ ಲೋಪದೋಷಗಳು ಬರುವುದಕ್ಕೆ ಕಾರಣವಾಗುತ್ತದೆ. ಅದೇನೆಂದರೆ ಕೆಲವು ಕಡೆ ಕೆರೆಕಟ್ಟೆಗಳಲ್ಲಿ ನಿವೇಶನ ಮಾಡಿಕೊಡುತ್ತಾರೆ.

ಅದಕ್ಕೆ ಇನ್ನು ಮುಂದೆ ನಾವು ಆಲೋಚನೆ ಮಾಡುತ್ತಿದ್ದೇವೆ ಈ ಭೂಮಿ ಎಲ್ಲಿದೆ, ಯಾವುದನ್ನು ಆಶ್ರಯಕ್ಕೆ ಕೊಡಬೇಕು ಅದನ್ನು ನಿಗದಿಪಡಿಸತಕ್ಕಂಥ ಅಧಿಕಾರವನ್ನು ಹಾಗೂ ಅರ್ಹತೆಯುಳ್ಳ ವ್ಯಕ್ತಿಗಳನ್ನು ಪರಿಶೀಲನೆ ಮಾಡತಕ್ಕಂಥ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡಬೇಕೆಂದು ನಿರ್ಧರಿಸುತ್ತೇವೆ. ಏತಕ್ಕೆಂದರೆ, ಟಾಸ್ಕ್‌ಫೋರ್ಸ್ ಕಮಿಟಿಯವರಿಗೆ ಅನೇಕ ಬಾರಿ ಆಗುವುದಿಲ್ಲ. You cannot expect the M.L.A.s to verify. ಯಾರಿಗೆ ಅರ್ಹತೆ ಇದೆ, ಯಾರಿಗೆ ಅರ್ಹತೆ ಇಲ್ಲ ಅಂತ ಹೇಳಿ ಅದಕ್ಕೆ ಸರಿಯಾದ ಡಾಕ್ಯುಮೆಂಟೇಷನ್ ಸಹಅಧಿಕಾರಿಗಳು ಮಾಡಿದ ಮೇಲೆ ಮಾತ್ರ ಆಶ್ರಯ ಕಮಿಟಿಯವರು ಆ ಅಪ್ಲಿಕೇಷನನ್ನು ಪರಿಶೀಲನೆ ಮಾಡಬೇಕು In the beginning, it was a very good program. ಆ ಪಟ್ಟಿಯಲ್ಲಿ ಅಡ್ರೆಸ್‌ಗಳು ಇರುವುದಿಲ್ಲ. ಅರ್ಹತೆ ವಿಚಾರದಲ್ಲಿ ಇರಬಹುದು, ಮತ್ತೊಂದು ಇರಬಹುದು, ಸರಿಯಾದ ಮಾಹಿತಿ ಇದೆಯೋ ಇಲ್ಲವೋ ಎಂಬುದನ್ನು ಶಾಸಕರು ನೋಡುವುದಕ್ಕಾಗುವುದಿಲ್ಲ. I think we will have to pin down the responsibility to officers. ಏಕೆಂದರೆ ಸರಿಯಾಗಿ ಡಾಕ್ಯುಮೆಂಟೇಶನ್ ಆಗಿ ಅವರ ಪಟ್ಟಿ ಅವರ ಆದಾಯದ ವಿಚಾರ ಮತ್ತು ಅರ್ಹತೆ ಇದೆಯೇ ಇಲ್ಲವೋ ಎಂಬುದನ್ನು ನೋಡಿ ಇವತ್ತು ಅದನ್ನು ಟಾಸ್ಕ್ ಫೋರ್ಸ್ ಕಮಿಟಿಗೆ ಕೊಟ್ಟೇ ಮಾಡಲಾಗುತ್ತದೆ. ಮತ್ತು ಸರಿಯಾದಂಥ, ಗುರುತಿಸಿದಂಥ ಭೂಮಿಯನ್ನು ಕೊಡಲಿಕ್ಕೆ ಸಾಧ್ಯ ಇದೆಯೇ ಇಲ್ಲವೇ ಎಂಬ ಮಾಹಿತಿಯನ್ನು ಕೊಟ್ಟು ಮೇಲೆಯೇ ಮಾಡಬೇಕು ಎಂದು ಹೇಳಿ ಆಶ್ರಯ ಸಮಿತಿಯ ಮಾರ್ಗದರ್ಶನವನ್ನು ಪುನರ್‌ರೂಪಿಸಬೇಕು ಮತ್ತು ಇದಕ್ಕೆ ಸರಿಯಾದ ಮಾರ್ಗದರ್ಶನ ಕೊಡದಿದ್ದರೆ ಸನ್ಮಾನ್ಯ ಕೃಷ್ಣನವರ ಮೇಲೆ ಬಂದಂಥ ಅಪವಾದ ಬೇರೆ ಅನೇಕ ಶಾಸಕರ ಮೇಲೆಯೂ ಕೂಡ ಬರಬಹುದು. ಆದ್ದರಿಂದ ಅಪವಾದ ಬಾರದ ರೀತಿಯಲ್ಲಿ ಇದನ್ನು ತಡೆಹಿಡಿದು ನಿಲ್ಲಿಸಲಿಕ್ಕೆ ಸರಿಯಾದ ಮಾರ್ಗದರ್ಶನ ಗುರುತಿಸತಕ್ಕಂಥ ಅವಶ್ಯಕತೆ ಇದೆ. ಇದು ಬಹಳ ಒಳ್ಳೆಯ ಕಾರ್ಯಕ್ರಮವಾಗಿರುವುದರಿಂದ ಆಶ್ರಯ ಬಗ್ಗೆ ನಾವು ಹೆಚ್ಚು ಸಂಶಯಗಳನ್ನು ಪಡುತ್ತೇವೆ. ಇಲ್ಲಿ ಸರ್ಕಾರದ ಪ್ರತಿಷ್ಠ ಕೂಡ ಇಲ್ಲ, ಇದನ್ನು ರದ್ದುಮಾಡಿ ಅರ್ಹತೆಯ ಪಟ್ಟಿಯನ್ನು ಪುನಃ ರಚಿಸಿ ಅರ್ಹತೆಯುಳ್ಳವರಿಗೆ ಮಾತ್ರ ಕೊಡತಕ್ಕಂಥ ವ್ಯವಸ್ಥೆಯನ್ನು ಕೊಡುತ್ತೇವೆ. This can be examined along with the rest of the applications.

ಆದ್ದರಿಂದ ಇದರಲ್ಲಿ ಸರ್ಕಾರ ಪ್ರತಿಷ್ಠೆ ಏನೂ ಇಲ್ಲ. ಆದರೆ ಇನ್ನೊಬ್ಬರ ಮೇಲೆ ಆಪಾದನೆ ಮಾಡಬೇಕಾದರೆ ಸರಿಯಾದ ಪುರಾವೆ ಇರಬೇಕಾಗುತ್ತದೆ. ತನಿಖೆಯಲ್ಲಿ ಅಂಥ ಪುರಾವೆ ಏನೂ ಕಂಡುಬಂದಿಲ್ಲ. ಪ್ರೈಮಾ ಫೇಸಿಯಲ್ಲೂ ಪ್ರೂವ್ ಆಗಿಲ್ಲ. ಆದ್ದರಿಂದ ಅದನ್ನು ಇಲ್ಲಿಗೆ ರದ್ದು ಮಾಡಿ, ಜನಗಳಿಗೆ ಸಂಶಯ ಬರದ ಹಾಗೆ ಮುಂದೆ ನಾವು ಎಲ್ಲಾ ಆಶ್ರಯ ಸಮಿತಿಗಳಿಗೆ ಸರಿಯಾದಂಥ ಮಾರ್ಗದರ್ಶನ ಕೊಡುವ ಅವಶ್ಯಕತೆ ಇದೆ. ಆದ್ದರಿಂದ ಇದನ್ನು ರಿಲ್ಯಾಕ್ಸ್ ಮಾಡತಕ್ಕಂಥ

ಅಧಿಕಾರವನ್ನು ಬಹುಶಃ ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟುಬಿಟ್ಟರೆ ಆಶ್ರಯ ಸಮಿತಿಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛಿಪಡುತ್ತೇವೆ.

ಡಾ॥ ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ಒಂದು ಸಲಹೆ, ನಾನು ಅಧ್ಯಕ್ಷರ ಮೂಲಕ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನೀವು ಡೆಪ್ಯುಟಿ ಕಮಿಷನರ್‌ಗಳಿಗೆ ಅಧಿಕಾರವನ್ನು ಕೊಟ್ಟರೆ, ಅವರು ಕೂಡಾ ಲೋಕಲ್ ಆಫೀಸರ್‌ಗಳ ಹತ್ತಿರವೇ ಸರ್ವೇ ಮಾಡಿಸುವುದು ; ಅಲ್ಲೂ ಅವ್ಯವಹಾರವಾಗುತ್ತದೆ. ಅದಕ್ಕೋಸ್ಕರ ನಾನು ತಮ್ಮನ್ನು ಕೇಳಿಕೊಳ್ಳುವುದೇನೆಂದರೆ, ಲೋಕಲ್ ಇಂಟಿಲಿಜೆನ್ಸ್‌ನವರಿಗೆ ಆ ಲಿಸ್ಟ್ ಕೊಟ್ಟು ಬಿಟ್ಟರೆ ಒಳ್ಳೆಯದು. ಆಶ್ರಯ ಟಾಸ್ಕ್ ಫೋರ್ಸ್ ಕಮಿಟಿಯವರು ಮಾಡಿದ ಲಿಸ್ಟ್‌ನ್ನು ಲೋಕಲ್ ಇಂಟಿಲಿಜೆನ್ಸ್‌ಗೆ ಕೊಡಿ. ನಾನು ಹೇಳುತ್ತಿರುವುದು ಒಳ್ಳೆಯ ಉದ್ದೇಶದಿಂದ. ಡೆಪ್ಯುಟಿ ಕಮಿಷನ್‌ರವರಿಗೆ ಆ ಅಧಿಕಾರ ಕೊಟ್ಟರೆ ಅಲ್ಲಿರತಕ್ಕಂಥ ಗ್ರಾಮ ಲೆಕ್ಕಾಧಿಕಾರಿಗಳ ಹತ್ತಿರ ಸರ್ವೆ ಮಾಡಿಸುತ್ತಾರೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಟ್ಟಿದ್ದಾರೆ, ಇದರಿಂದ ನನಗೆ ಬಹಳ ನೋವಾಗಿದೆ. ಇಷ್ಟು ಲೆವಲ್ ತನಕ ತಾವು ಡಿಫೆಂಡ್ ಮಾಡಲಿಕ್ಕೆ ತಾವು ಹೋಗುತ್ತೀರೆಂದು ನನಗೆ ಗೊತ್ತಿರಲಿಲ್ಲ. ತಾವು ಏನು ಹೆಜ್ಜೆಗೆ ಮಾತು ಹೇಳುತ್ತಿದ್ದರಲ್ಲಾ? ಒಂದು ದಕ್ಷ, ಓಪನ್ ಗೌರ್ನಮೆಂಟ್ ಕೊಡುತ್ತೇನೆ, ಪ್ರಾಮಾಣಿಕ ಗೌರ್ನಮೆಂಟ್ ಕೊಡುತ್ತೇನೆ ಎಂದು ಇದರಿಂದ ಸಾಧ್ಯವಾಗುವುದಿಲ್ಲವೆಂದು ತಮ್ಮ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತೇನೆ. ಡಿವಿಜನಲ್ ಕಮಿಷನರ್ ಕೊಟ್ಟ ವರದಿ ತಾವು ಕೊಡಬೇಕು. ರೆವಿನ್ಯೂ ಮಿನಿಸ್ಟರ್ ಇಲ್ಲೇ ಇದ್ದಾರೆ. ನಾನು ಚ್ಯಾಲೆಂಜ್ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ. ಅಲ್ಲಿಗೆ ರೆವಿನ್ಯೂ ಮಿನಿಸ್ಟರ್ ವಿಸಿಟ್ ಮಾಡಿದ್ದಾರೆ, ಇದರಲ್ಲಿ ಯಾವುದೇ ತರಹದ ಫ್ರಾಡ್ ನಡೆದಿಲ್ಲವೆಂದು ಅವರು ಹೇಳಬೇಕು. ಇದರಲ್ಲಿ ದುರ್ವ್ಯವಹಾರಗಳು ನಡೆದಿಲ್ಲವೆಂದು ಅವರು ಹೇಳಬೇಕು. I am prepared to resign from this House. He has visited the spot. ಈ ಲೆವೆಲ್ ಮಾನ್ಯ ಮುಖ್ಯಮಂತ್ರಿಗಳು ಡಿಫೆಂಡ್ ಮಾಡಲಿಕ್ಕೆ ಹೋಗಬಾರದಾಗಿತ್ತು. ಡಿವಿಜನಲ್ ಕಮಿಷನರ್ ರಿಪೋರ್ಟರ್‌ನಲ್ಲಿ ಹ್ಯಾಂಡಿಕ್ಯಾಪ್ಡ್ ಅವರದ್ದು ಇಲ್ಲ. 850 ಜನ ಹ್ಯಾಂಡಿಕ್ಯಾಪ್ಡ್ ಎಂದು ಏನು ಹೇಳುತ್ತಾರೆ; ಅದು ಇಲ್ಲ.

SRI. M. VEERAPPA MOILY : I have to atleast believe my eyes.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ, they are the beneficiaries. How can you say that they are same beneficiaries? ಎರಡನೆಯದು ಮಾನ್ಯ

ಮುಖ್ಯಮಂತ್ರಿಗಳು ಹೇಳುತ್ತಾರೆ, 850 ಜನ ಬಂದು ಅವರನ್ನು ಭೇಟಿ ಆಗಿದ್ದಾರೆಂದು; ತಾವು ಕಣ್ಣಿನಿಂದ ನೋಡಿರಬೇಕಾದರೆ ಅವರು ಅಲ್ಲಿಗೆ ಬಂದಿರಬೇಕಲ್ಲಾ? ಅಲ್ಲದೆ 4 ನೂರು ಜನ ಬಂದಿದ್ದರು ಅಥವಾ 5 ನೂರು ಜನ ಬಂದಿದ್ದರು ಎಂದು ಹೇಳಿ; ಅದಕ್ಕೆ ನನ್ನ ಅಬ್ಜೆಕ್ಷನ್ ಇಲ್ಲ. ನೀವು ಹೇಗೆ ಅಷ್ಟು ಜನ ಹ್ಯಾಂಡಿಕ್ಯಾಪ್ ಇದ್ದರೆಂದು ಹೇಳುತ್ತೀರಿ ; ನಾನು ಆಗಲೇ ಹೇಳಿದ್ದೇನೆ, ಅಂಗವಿಕಲರಿಗೆ, ಬ್ಲೈಂಡ್‌ನವರಿಗೆ, ನಿವೇಶನ ಕೊಡಲಿಕ್ಕೆ ಇಂಥಹ ಕಾಯಿದೆಯನ್ನು ಬೇಕಾದರೆ ವೇವ್ ಮಾಡಿ. ಅದಕ್ಕೆ ನಮ್ಮ ಅಬ್ಜಕ್ಷನ್ ಇಲ್ಲ. ನಮಗೆ ಅದರ ಬಗ್ಗೆ ಸಿಂಪಥಿ ಇದೆ. 850 ಜನ ಹ್ಯಾಂಡಿಕ್ಯಾಪ್ ನನ್ನ ಹತ್ತಿರ ಬಂದಿದ್ದರೆಂದು ತಾವು ಹೇಳುತ್ತೀರಿ. ಹಾಗಾದರೆ ಅದನ್ನು ಡಿವಿಜನಲ್ ಕಮಿಷನರ್‌ರವರು ಏಕೆ ಬರೆದಿಲ್ಲ? ಡಿವಿಜನಲ್ ಕಮಿಷನ್‌ರವರು ತನಿಖೆ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ. ಇವತ್ತು ನೀವು ಆ ರಿಪೋರ್ಟ್‌ಗೆ ಗೌರವ ಕೊಡುತ್ತೀರೇನು? ಆ ರಿಪೋರ್ಟ್‌ನಲ್ಲಿ ಹ್ಯಾಂಡಿಕ್ಯಾಪ್ಡ್ ಎಂದು ಇಲ್ಲ. ಅವರು ರಿಪೋರ್ಟ್‌ನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಅಲಾಟ್‌ಮೆಂಟ್ ಕ್ಯಾನ್ಸಲ್ ಮಾಡಿ, ಇದು ಸರಿಯಾಗಿ ಅಲಾಟ್‌ಮೆಂಟ್ ಆಗಿಲ್ಲ ಎಂದು ಕ್ಲಿಯರ್ ಆಗಿ ಡಿವಿಷನಲ್ ಕಮಿಷನ್‌ರವರು ಹೇಳಿದ್ದಾರೆ. ಆದರೆ ಇಲ್ಲಿ ಯಾವ ದುರ್ವ್ಯವಹಾರಗಳೂ ಅಲ್ಲ, ಇಲ್ಲಿ ಅಧಿಕಾರದ ದುರುಪಯೋಗವಾಗಿಲ್ಲ, ಎಂದು ತಾವು ಹೇಳುತ್ತೀರಿ. ಅವರು ತಮ್ಮ ಮಂತ್ರಿಮಂಡಲದಲ್ಲಿ ಸದಸ್ಯರಿದ್ದಾರೆ. ಅವರನ್ನು ಡಿಪೆಂಡ್ ಮಾಡುವ ಕರ್ತವ್ಯ ತಮಗಿದೆ ಅದನ್ನು ತಾವು ಮಾಡುತ್ತಿದ್ದೀರಿ. ನಾನು ಏನು ಕೇಳುತ್ತಿದ್ದೇನೆ ಅಂದರೆ, ನಾವು ಅಪೋಸಿಷನ್ ಪಾರ್ಟಿ ಲೀಡರ್ ಆಗಿ, ಕೆಲವು ಚಾರ್ಜ್ ಮಾಡಿದ್ದೇವೆ. ತಾವು ಅದನ್ನು ಡಿನೈ ಮಾಡಿ. ನಾನು ಏನು ಹೇಳುತ್ತಿದ್ದೇನೆಂದರೆ, ಇವತ್ತು ಸತ್ಯ ಹೊರಗೆ ಬರಬೇಕು. ನಾನು ಹೇಳಿದ್ದರಲ್ಲಿ ಸತ್ಯ ಇರಬೇಕು ಅಥವಾ ತಾವು ಹೇಳಿದ್ದರಲ್ಲಿ ಸತ್ಯ ಇರಬೇಕು. ನಾನು ತಮ್ಮಲ್ಲಿ ಏನು ಕೇಳಿದ್ದೇನೆಂದರೆ ಆ ಮಂತ್ರಿಯವರು ರಾಜೀನಾಮೆ ಕೊಡಬೇಕು ಎಂದು. ನಾನು ಒಂದು ಹೆಜ್ಜೆ ಮುಂದೆ ಹೋಗಿ ಕೇಳುತ್ತೇನೆ. ತಾವು ಒಬ್ಬ ಮಂತ್ರಿ ಇನ್ನೊಸೆಂಟ್ ಎಂದು ಹೇಳಿದಾಗ, ನಾನು ತಮಗೆ ಹೇಳುತ್ತೇನೆ. ಅದರ ಬಗ್ಗೆ ಸಿ.ಓ.ಡಿ. ತನಿಖೆಗೆ ಆರ್ಡರ್ ಮಾಡಿ. Let the report of the Divisional Commissioner be placed on the Table of this House.

ಅಲ್ಲಿ ಏನಿದೆ ಎಂದು ಇಡೀ ಜಗತ್ತಿನ ಜನರಿಗೆ ಗೊತ್ತಾಗಲಿ. ಸೈಟುಗಳನ್ನು ಬಡವರಿಗೆ ಕೊಡಿ, ಪರಿಶಿಷ್ಟ ಜನಾಂಗದವರಿಗೆ ಕೊಡಿ, ಹ್ಯಾಂಡಿ ಕ್ಯಾಪ್‌ನವರಿಗೆ ಕೊಡಿ. ಆದರೆ ಮದ್ರಾಸಿನ ಜನ, ಆಂಧ್ರದ ಜನರುಗಳಿಗೆ ಅವರು ಪಟ್ಟಾಪುಸ್ತಕವನ್ನು ಮನೆಯಲ್ಲಿ ಇಟ್ಟುಕೊಂಡು ಬಿ.ಡಿ.ಓ. ಅವರ ಸಹಿ ಹಾಕಿ ಕೊಟ್ಟಿದ್ದಾರೆ. ಆದರೆ ತಾವು ಇವತ್ತು ಏನೂ ಆಗಿಲ್ಲವೆಂದು ಹೇಳುತ್ತೀರಿ. ಇದೇ ತಮ್ಮ ಉತ್ತರ ಇದ್ದರೆ, ಇದರ ಬಗ್ಗೆ ರೆವಿನ್ಯೂ ಮಿನಿಸ್ಟರ್ ಇಲ್ಲೇ ಇದ್ದಾರೆ. ಅವರು ಇದರಲ್ಲಿ ಇಂಟರ್‌ಫಿಯರ್ ಆಗಬೇಕು. ಸತ್ಯ ಪರಿಸ್ಥಿತಿ ಹೇಳಬೇಕು. ತಾವು ಹೇಳಲಿಲ್ಲವೆಂದರೆ, either the Minister should resign or you sack him. You may please order COD enquiry into this. Why do you hesitate ? Let the truth come out. ರೆವಿನ್ಯೂ ಮಿನಿಸ್ಟರ್‌ರವರು ಸತ್ಯ ಸಂಗತಿ ತಿಳಿಸಬೇಕು. ಹೇಳದಿದ್ದರೆ I will suspect your integrity. You have visited

that area. You have also gone there. You know the truth. You should come out with the truth. Let the truth come out. I am not against only particular Minister.

ನಾನು ಹೇಳುತ್ತಿದ್ದೇನೆ, ಇದರ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಿ. ನಿಜ ಹೊರಗೆ ಬರಲಿ. ಸಿ.ಬಿ.ಐ. ಎನ್‌ಕ್ವೈರಿ ಮಾಡಿಸುವುದು ಅವರಿಗೆ ಬಿಟ್ಟ ಪ್ರಶ್ನೆ. ಎರಡನೆಯದು ಇವತ್ತು ಎಷ್ಟೋ ಪರಿಶಿಷ್ಟ ಜಾತಿ ಜನಾಂಗದವರು ಕಳೆದ 6 ತಿಂಗಳಿಂದ ಹೋರಾಟ ಮಾಡುತ್ತಿದ್ದಾರೆ. ಅಲಾಟ್‌ಮೆಂಟ್ ಕ್ಯಾನ್ಸಲ್ ಮಾಡಿ ಎಂದು ಹೋರಾಟವನ್ನು 6 ತಿಂಗಳಿನಿಂದ ಮಾಡುತ್ತಿದ್ದಾರೆ. ಅಲ್ಲಿಗೆ ಮಾನ್ಯ ಕಂದಾಯ ಸಚಿವರು ಭೇಟಿಯಾಗಿದ್ದರು. ತಾವು ಇವತ್ತು ಅಲಾಟ್‌ಮೆಂಟ್ ಕ್ಯಾನ್ಸಲ್ ಮಾಡಿದ್ದೀರಿ. ಎಷ್ಟೋ ಕೇಸ್‌ಗಳು ಅಲಿಲ್ ಪೈಲ್ ಆಗಿವೆ. ಕೆಂಪಯ್ಯ ಡಿ.ಸಿ.ಪಿ., ಮತ್ತು ಹಾಲಪ್ಪನವರು ಈ ಇಬ್ಬರೂ - they have danced to the tunes of the Minister. Whatever the cases you have filed against the SC/ST, Backward classes and poor people, you must withdraw them. They are cultivating the land. It must be regularised. ಮೂರನೆಯದಾಗಿ ಮಾನ್ಯ ಕಂದಾಯಸಚಿವರಿಗೆ ಇದೆಲ್ಲಾಗೊತ್ತು. ಆ ಭೂಮಿ ಏನಿತ್ತು ಅದರಲ್ಲಿ ಮುಂಚೆ ಪರಿಶಿಷ್ಟ ಜಾತಿಯವರು ಕಲ್ಟಿವೇಟ್ ಮಾಡುತ್ತಿದ್ದರು. ಬಗರ್‌ಹುಕುಂ ಸಾಗುವಳಿ ಪ್ರಕಾರ, ಅವರಿಗೆ ಅದು ಹೋಗಬೇಕಾಗಿತ್ತು. ಆದರೆ ನಿಮ್ಮದು ಒಂದು ಕಂಡೀಷನ್ ಅಲ್ಲಿ ಇದೆ. ಸಿಟಿ ಲಿಮಿಟ್ ಅಂದರೆ 15 ಕಿಲೋಮಿಟರ್ ಒಳಗೆ ಇದ್ದರೆ ರೆಗ್ಯುಲರೈಸ್ ಮಾಡಬಾರದೆಂದು ಇದೆ.

6.55 ಪಿ. ಎಂ.

ಈ ಭೂಮಿಯನ್ನು ಅವರು ರೆಗ್ಯುಲರೈಸ್ ಮಾಡಲಿಕ್ಕೆ ಆಗಿಲ್ಲ, ಆ ಪರಿಶಿಷ್ಟ ಜಾತಿಯ ಜನರಿಗೆ ಅಲ್ಲಿಂದ ಇವಿಕ್ಟ್ ಮಾಡಿ ಈ ತಮಾಷೆ ನಡೆದಿದೆ. you find out the facts. ನಾರ್ಮಲ್ ಕೋರ್ಸ್‌ನಲ್ಲಿ ಎಸ್.ಸಿ., ಎಸ್. ಟಿ., ಜನರಿಗೆ ರೆಗ್ಯುಲರೈಸ್ ಆಗಬೇಕಾಗಿತ್ತು; ಅವರಿಗೆ ಈ ಭೂಮಿಯನ್ನು ಕಾನೂನಿನಲ್ಲಿ ಕೊಡಲಿಕ್ಕೆ ಬರಲಿಲ್ಲ ಅಂದರೆ ಅವರಿಗೆ compensation ಕೊಟ್ಟು ನಾರ್ಮಲ್ ಕೋರ್ಸ್‌ನಲ್ಲಿ ರೆಗ್ಯುಲರೈಸ್ ಆಗಬೇಕಾಗಿತ್ತು. Give them compensation to poor SC/ STs ಇದನ್ನು ರದ್ದು ಮಾಡಿ ಲೋಕಲ್ ಜನರಿಗೆ ಕೊಡುತ್ತೇವೆಂದು ಹೇಳಿದ್ದೀರಿ; ಅದಕ್ಕೆ ಸಂತೋಷ; ಲೋಕಲ್ ಜನರಿಗೆ ಕೊಡಿ. ಪ್ರಾಧಾನ್ಯತೆಯನ್ನು ಕೊಡಿ, ಹ್ಯಾಂಡಿಕ್ಯಾಪ್ ಆದರೆ ಲೋಕಲ್ ಆಗದಿದ್ದರೂ ಕೊಡಿ. You can amend the rules - ನನ್ನದು ತಕರಾರು ಇಲ್ಲ I have no objection. ಬಡವರಿಗೆ ಕೊಟ್ಟರೆ ನನ್ನದು ತಕರಾರು ಇಲ್ಲ, ಆ ಭೂಮಿ particularly the prime land ಮಾನ್ಯ ಮುಖ್ಯಮಂತ್ರಿಗಳೇ, - please understand, the value of the land is 70-80 Crores. It is 16 km from Vidhana Soudha. It can be sold for 1 1/2 lakhs to 2 lakhs a gunta. 70-80

ಕೋಟಿ ರೂಪಾಯಿಯ ಆಸ್ತಿಯನ್ನು ಈವತ್ತು ಅವರು ಮನೆಯಲ್ಲಿ ಕುಳಿತು ಹರಾಜು ಹಾಕಿದ್ದಾರೆ. ಇವತ್ತು ತಾವು ಹೇಳಿದ್ದೀರಲ್ಲಾ ಈ ನಿಶಾನ್ ಅಂತ; ಈ ನಿಶಾನ್ ಅನ್ನುವವರು ಯಾರೂ ಇಲ್ಲ ; ಇವರು ತಮ್ಮ ಆಫೀಸಿನ ಮುಂದೆ ಒಂದು ಪಟ್ಟಿಯನ್ನು ಹಾಕಿದ್ದರು. ಯಾರ್ಯಾರಿಗೆ ಸೈಟು ಬೇಕೋ ಅವರು ಬನ್ನಿ, ನಾವು ಮಾರಾಟ ಮಾಡುತ್ತೇವೆಂದು ಪಟ್ಟಿ ಹಾಕಿದ್ದರು. ಇದೇ ಹೋಬಳಿಯಲ್ಲಿ ನಂಬರ್ ಹಾಕಿದ್ದಾರೆ, ಇಂಥಿಂಥ ಸರ್ವೆ ನಂಬರ್‌ನಲ್ಲಿ ಹೂಡಿನಲ್ಲಿ ನಾವು ಸೈಟನ್ನು ಕೊಡುತ್ತೇವೆ ಬನ್ನಿ ಎಂದು ಹೇಳಿದ್ದಾರೆ. ಇಲ್ಲಿ ರಾಕೆಟ್ ನಡೆಯಲಿಕ್ಕೆ ಸಾಧ್ಯವಿದೆ. ನೂರಾನ್ ಅನ್ನುವವರು ಯಾರೆಂದು ಗೊತ್ತಾಗಬೇಕಾಗಿದೆ. ಇದರ ಬಗ್ಗೆ ತನಿಖೆ ನಡೆಯಬೇಕಾಗಿದೆ. ತಮ್ಮ ಸಚಿವರು ಪ್ರಾಮಾಣಿಕರಾಗಿದ್ದಾರೆ ಎಂಬುದು it is your opinion, I can't dispute your opinion. ಆದರೆ ನನ್ನ ದೃಷ್ಟಿಯಿಂದ ನಾನು ಚಾರ್ಜ್ ಮಾಡಿದ್ದೇನೆ. you have already cancelled the allotments because of the Divisional Commissioner's report. ಡಿವಿಜನಲ್ ಕಮಿಷನರ್ ರಿಪೋರ್ಟ್‌ನಲ್ಲಿ ಸ್ಪಷ್ಟವಾಗಿ ಬರೆದಿದ್ದಾರೆ. ಇದರಲ್ಲಿ ಸರಿಯಾಗಿ ಅಲಾಟ್‌ಮೆಂಟ್ ಆಗಿಲ್ಲ, ಇಲ್‌ಲೀಗಲ್ ಆಗಿದೆ, ಹ್ಯಾಂಡಿಕ್ಯಾಪ್ಡ್ ಯಾರೂ ಕಾಣಿಸುತ್ತಿಲ್ಲ ಎಂದು. It is very clear in the Divisional - Commissioner's report. You can place it before the House. If it is wrong, if it is not in the Divisional Commissioner's report, I am prepared to apologise. ನಾನು ಈಸದನದಲ್ಲಿ ಕ್ಷಮೆಯನ್ನು ಕೇಳಲಿಕ್ಕೂ ತಯಾರಾಗಿದ್ದೇನೆ. ಆದರೆ ಡಿವಿಜನಲ್ ಕಮಿಷನರ್ ವರದಿಗೆ ವಿರುದ್ಧವಾಗಿ ತಾವು ಒಂದು ಹೇಳಿಕೆಯನ್ನು ಕೊಟ್ಟು, ತಾವು ಮಿನಿಸ್ಟರ್‌ಗೆ ಡಿಫೆಂಡ್ ಮಾಡುವುದಕ್ಕೆ ಹೋದರೆ ತಮಗೆ ಒಳ್ಳೆಯ ಹೆಸರು ಬರುವುದಿಲ್ಲ. ದಯಮಾಡಿ ನಾನು ಹೇಳಿದ ಹಾಗೆ ಸಿ.ಓ.ಡಿ. ಎನ್‌ಕ್ವೈರಿಯನ್ನು ಮಾಡಿಸಿ. ಪರಿಶಿಷ್ಟ ಜಾತಿಯ ಜನರು ಯಾರು ಮಾಡುತ್ತಿದ್ದರು ಅವರಿಗೆ ಕಾಂಪನ್ಸೇಷನ್ ಕೊಡುವ ವ್ಯವಸ್ಥೆಯನ್ನು ಮಾಡಿ, ಸ್ಥಳೀಯ ಜನರಿಗೆ ತಾವು ಸೈಟ್ ಕೊಡುವುದಾದರೆ, ಸೈಟನ್ನು ಕೊಡಿ, ಅವರಿಗೆ ಬೇರೆ ಕಡೆ ಕೊಟ್ಟು, ಇದನ್ನು ಇಂಡಸ್ಟ್ರಿಯಲ್ ಏರಿಯಾ ಎಂದು ರಿಸರ್ವ್ ಮಾಡಬಹುದು; ಏಕೆಂದರೆ ಇದರ ಸುತ್ತಲೂ ಇಂಡಸ್ಟ್ರಿಯಲ್ ಏರಿಯಾ ಇದೆ, This land is near the airport. ಹಾಗಾಗಿ ಇದು ಪ್ರೈಮ್ ಲ್ಯಾಂಡ್; ಇದರ ಬಗ್ಗೆ ತಾವು ಯಾವುದೇ ಸಂಕೋಚಪಡಬಾರದು. ತಮಗೆ ಯಾವ ಭಯವೂ ಇಲ್ಲ, ಏಕೆಂದರೆ ತಾವು ಒಳ್ಳೆಯ ಕೆಲಸವನ್ನು ಮಾಡುವುದಕ್ಕೆ ಹೊರಟಿದ್ದೀರಿ, ಒಳ್ಳೆಯ ಕೆಲಸವನ್ನು ಮಾಡಲು ಹೊರಟಿರುವಾಗ, ಕೆಲವು ಸಾರಿ ನಮಗೆ ಬೇಕಾದ ಜನರಿಗೆ ನಾವು ತ್ಯಾಗವನ್ನು ಮಾಡಬೇಕಾಗುತ್ತದೆ. ಆದಕಾರಣ ಇದರ ಬಗ್ಗೆ ತಾವು ಹಿಂದುಮುಂದು ನೋಡಬಾರದು. ಸಿ.ಓ.ಡಿ. ತನಿಖೆಯನ್ನು ಮಾಡಿ; ನಾನೇನು ಹೇಳಿದ್ದೇನೆ, ಅದರ ಪ್ರಕಾರ ಸೂಕ್ತವಾದ ಕ್ರಮವನ್ನು ತಾವು ತೆಗೆದುಕೊಳ್ಳಬೇಕು. ಈ ಟ್ಯಾಂಕ್ ಬೆಡ್ ಬ್ಯಾಂಡ್ ಬಗ್ಗೆ ನಾವು ಹೇಳಿದ್ದೇವೆ. Can you tell who has encroached that tankbed land ? Your own Hon'ble Minister has enroached the tankbed land. Let the Revenue Minister deny this. Let him deny. I want to know from his mouth. Revenue Minister is here. He knows the

truth. Why should he be hesitated? he has to protect the tankbed. I want a reply from him. He has visited the spot.

ಯಾವ ಟ್ಯಾಂಕ್ ಬೆಡ್ ಲ್ಯಾಂಡ್ ಅನ್ನೂ ರಿಜಿಸ್ಟರ್ ಮಾಡಿಲ್ಲ ಎಂದು ಹೇಳಿ. I take a challenge today. ಇವತ್ತು ಎಷ್ಟು ಪ್ರೊಟೆಕ್ಷನ್ ಮಾಡಬೇಕೋ ಅಷ್ಟನ್ನು ಮಾಡಿ ; ಆ ಲೆವಲ್ ಮೇಲೆ ಮಾಡಲಿಕ್ಕೆ ಹೋಗಬೇಡಿ. ಏಕೆಂದರೆ ನೀವು ಇವತ್ತು ಡಿಫೆಂಡ್ ಮಾಡಿ ಹೋಗಬಹುದು. ಅವರು ಉಳಿಯಬಹುದು. ಆದರೆ, ಸತ್ಯ ಇವತ್ತಲ್ಲ ನಾಳೆ ಹೊರಗೆ ಬರಬೇಕಾಗುತ್ತದೆ. ಅದಕ್ಕಾಗಿ ತಾವು ದಯಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಇಲ್ಲಿ ಯಾವುದೇ ಸತ್ಯವನ್ನು ಮರೆಮಾಚತಕ್ಕಂಥ ಪ್ರಯತ್ನವನ್ನು ನಾವು ನಡೆಸಬೇಕಾದಂತಹ ಅವಶ್ಯಕತೆ ಇಲ್ಲ. You have seen how I function. You can have faith. ತಾವು ಇದರ ಬಗ್ಗೆ ಎಲ್ಲವನ್ನೂ ಹೇಳಿದ್ದೀರಿ, ಡಿವಿಜನಲ್ ಕಮಿಷನರ್ ರಿಪೋರ್ಟ್ ಬಗ್ಗೆ ಹೇಳಿದಿರಿ. There is nothing to hide and I can place it before you. There is nothing. I can read out the part of it. It is a sketchy report. The Divisional Commissioner is yet to go into the details. ಏನೋ ಒಳಗೆ ಅಡಗಿಸಿಕೊಂಡು ನಾನು ಏನೋ ಒಂದು ಡಿಫೆಂಡ್ ಮಾಡಲಿಕ್ಕೆ ಹೋಗಿದ್ದೇನೆ ಎಂದು ಹೇಳತಕ್ಕಂಥದ್ದು ಸರಿಯಲ್ಲ. Of course, with all that ಇದೆಲ್ಲಾ ಸರಿಯಾಗಿ ಬಹಳ in-depth ವಿಚಾರಣೆ ಮಾಡಿ ಡಿವಿಜನಲ್ ಕಮಿಷನರ್ ವರದಿಯನ್ನು ಕೊಟ್ಟಿದ್ದಾರೆ.

SRI. R. V. DESHPANDE : The concerned Revenue Minister is here. Let him tell.

SRI. M. VEERAPPA MOILY : Please, I am not afraid. I am speaking on behalf of every one. We have nothing to suppress about it.

SRI. R. V. DESHPANDE : All right.

SRI. M. VEERAPPA MOILY : There is lot of transparency in our administration. ವಿಚಾರಣೆಗೆ ಡಿವಿಜನಲ್ ಕಮಿಷನರ್‌ರನ್ನು ನೇಮಕ ಮಾಡಿದ್ದು ನಾವೇ; knowing fully well that ವರ್ತೂರು ಕ್ಷೇತ್ರ ಮಾನ್ಯ ಕೃಷ್ಣಪ್ಪನವರ ಕ್ಷೇತ್ರ ಎಂದು ಗೊತ್ತಿದೆ; ನಮಗೆ ಗೊತಿಲ್ಲದೆ ಮಾರಿದ್ದು ಎಂದು ತಿಳಿದುಕೊಳ್ಳಬೇಡಿ, ನಾವು ಡಿವಿಜನಲ್ ಕಮಿಷನರ್ ನೇಮಕ ಮಾಡಿದ್ದೇವೆ. ಡಿವಿಜನಲ್ ಕಮಿಷನರ್ has gone to that place. ಅಲ್ಲಿಗೆ ಹೋದಮೇಲೆ, ಅಲ್ಲಿ ಜನ ಸೇರಿದ್ದರು ; she could not meet all the beneficiaries. That is the problem. There is nothing to hide. I can show you this report also. ತಾವು ಆ ರಿಪೋರ್ಟನ್ನು ನೋಡುವುದಕ್ಕಿಂತ ಹೆಚ್ಚಾಗಿ ಜನ ಹೇಳಿದ್ದನ್ನು ಹೆಚ್ಚು ಗಮನಕ್ಕೆ ತೆಗೆದುಕೊಂಡಿದ್ದೀರಿ ; That is predominent in your kind.

SRI. R.V. DESHPANDE : I have taken a challenge to resign my seat. What more you want? I am asking the Revenue Minister to come out. ಏತಕ್ಕೆ ಕುಳಿತುಕೊಂಡಿರಿ?

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಏನನ್ನು ಬಯಸುತ್ತೀರೋ ಅದನ್ನೇ ಹೇಳಬೇಕೆಂದು ಹೇಳಿದರೆ ನಾನು ಸತ್ಯದಿಂದ ದೂರ ಹೋಗಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ರೆವಿನ್ಯೂ ಮಿನಿಸ್ಟರ್‌ರವರಿಂದ ಏತಕ್ಕೆ ಹೇಳಿಸುತ್ತಿಲ್ಲ ಎನ್ನುವುದೇ ಪ್ರಶ್ನೆ ಈಗ ಇರುವುದು.

ಶ್ರೀ ಸಿ. ಬೈರೇಗೌಡ : ತಪ್ಪಾಗಿದೆ, ಒಪ್ಪಿಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾನು ನಿಂತಿದ್ದೇನೆ. ತಾವು ದಯಮಾಡಿ ಆಲಿಸಬೇಕು. ಏನಾಗಿದೆ ಅಂದರೆ, ಯಾರೋ ಹೇಳಿದ್ದು ನಿಮ್ಮ ತಲೆಯಲ್ಲಿ ಬಂದುಬಿಟ್ಟಿದೆ. ಅದನ್ನು ಸ್ವಲ್ಪ ತೆಗೆದುಹಾಕಿ, ತಾವು ಕೂಡ ಸತ್ಯವನ್ನು ನೋಡಬೇಕೇ ಹೊರತು ಸತ್ಯವನ್ನು ಬೇರೆ ಯಾವುದೇ ದೃಷ್ಟಿಯಿಂದ ನೋಡಬಾರದು. ಅದೇ ನನ್ನ ವಾದ. ಸತ್ಯ ಎಲ್ಲರಿಗೂ ಒಂದೇ. ಸತ್ಯ ನನಗೆ ಮಾತ್ರ ನಿಮಗೆ ಇಲ್ಲ, ಅಥವಾ ನಿಮಗೆ ಮಾತ್ರ ನಮಗೆ ಇಲ್ಲ ಎಂದಲ್ಲ. ಸತ್ಯ ಎಲ್ಲರಿಗೂ ಒಂದೇ. ಸತ್ಯ ಡೀವಿಯೇಟ್ ಆಗಲಿಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲಿ ಪ್ರಶ್ನೆ ಇರುವುದು ಇಷ್ಟೆ, ಅವರೂ ಕೂಡ ಏನು ಹೇಳುತ್ತಾರೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

> "The details of the remaining addresses, their income and eligibility details are not available in the register and it is not possible on the basis of the information available on the

file to determine whether they are fictitious or whether they are also eligible and it is not possible to determine as their where abouts are not known"

ಆಫೀಸ್‌ನಲ್ಲಿರತಕ್ಕಂಥ ಫೈಲ್, ಆಫೀಸಿನಲ್ಲಿರತಕ್ಕಂಥ ರಿಜಿಸ್ಟರ್ ಇದರಿಂದ ನಮಗೆ ಯಾರು ಎಲಿಜಿಬಲ್ ಮತ್ತು ನಾಟ್ ಎಲಿಜಿಬಲ್ ಎಂದು ನೋಡಲಿಕ್ಕೆ ಆಗುವುದಿಲ್ಲಎಂದು ಹೇಳಿಬಿಟ್ಟಿದ್ದಾರೆ. ಅಷ್ಟೇ ರಿಪೋರ್ಟ್ ಇರುವುದು; ಅದಕ್ಕಿಂತ ಮುಂದೆ ಹೋಗಲಿಲ್ಲ. ಏಕೆಂದರೆ ನಿಜವಾದಂಥ ಫಲಾನುಭವಿಗಳು ಅವರ ವಿವರ, ಅವರ ವಿಚಾರಗಳನ್ನು ಇನ್ನೂ ಸಂಗ್ರಹ ಮಾಡಬೇಕು. She has not yet collected. ಫೈಲ್‌ನಲ್ಲಿ ರಿಜಿಸ್ಟರ್‌ನಲ್ಲಿ ಇಲ್ಲ ಎಂದು ಹೇಳಿದ ಮಾತ್ರಕ್ಕೆ ಅವರೆಲ್ಲಾ fictitious ಎಂದು ಹೇಳಲಿಕ್ಕೆ ಆಗುವುದಿಲ್ಲ. ಆದರೆ ಅವರು ನಿಜವಾಗಿ ಇದ್ದಾರೆಂದು ಹೇಳಲಿಕ್ಕೆ ಆಗುವುದಿಲ್ಲ. ವರದಿಯನ್ನು ಇಲ್ಲಿಗೆ ನಿಲ್ಲಿಸಿಬಿಟ್ಟಿದ್ದಾರೆ. She has just stopped at that. It is not a complete report also.

" It - is not possible to determine. Their where-abouts
are not known. - Eligibility and the residence of some allottees - was questioned and I propose to get the genuineness and eligibility verified by our staff."
What does it mean? - - - - -

"I propose to get the genuineness and eligibility verified - by our staff."

That - means, they may be eligibility : suppose they are entitled to get a site. ನಾವು ಅನ್ಯಾಯ ಮಾಡಿದ ಹಾಗೆ ಆಗುವುದಿಲ್ಲವೇ? ವಿರೋಧ ಪಕ್ಷದ ನಾಯಕರು ಚಾಲೆಂಜ್ ಮಾಡುತ್ತೇವೆ ಎಂದು ಹೇಳಿದ್ದೀರಿ, ಈ ಭಾವೋದ್ರೇಕವನ್ನು ನೋಡಿ ನನಗೆ ಏನು ಅನ್ನಿಸಿತು ಎಂದರೆ very responsible leader of the Opposition has made this representation and many others also ; ಹಾಗಿರುವಾಗ ನಾವು ಇದಕ್ಕೆ ಬೇಡಪ್ಪ, ನಮಗೆ ಇದರಲ್ಲಿ ಪ್ರತಿಷ್ಠೆ ಏನಿದೆ ಎಂದು ತಿಳಿದುಕೊಂಡೆವು. ಮಾನ್ಯ ಕೃಷ್ಣಪ್ಪನವರು ಹಟಮಾಡುತ್ತಿಲ್ಲ, ಅವರಿಗೆ ಹಠ ಏತಕ್ಕೆ? ನಿಜವಾದಂತಹ ಎಲಿಜಿಬಲ್ ಪರ್ಸನ್ಸ್‌ಗೆ ಕೊಡಬೇಕು, ಹ್ಯಾಂಡಿಕ್ಯಾಪ್ಸ್‌ಗಳಿಗೆ ಕೊಡಬೇಕು, ಬಡವರಿಗೆ ಕೊಡಬೇಕು ಎಂದು ಅಪೇಕ್ಷೆ ಅವರಿಗೆ ಇದ್ದಾಗ ಅದಕ್ಕೆ ಸಂಶಯ ಏನಿದೆ? That is why I said.

ಎಲ್ಲಾ ಆಶ್ರಯ ಕಮಿಟಿಯವರು ಸರಿಯಾದಂತಹ ಮಾಹಿತಿಯ ಪುಸ್ತಕವನ್ನು ಸಮಿತಿಗೆ ಒಪ್ಪಿಸದೆ ಇನ್ನು ಮುಂದೆ ಕೊಡಬಾರದು ಎಂದು; ಏಕೆಂದರೆ ನಾವು ಎಲ್ಲಾ ಶಾಸಕರು ತಾಪತ್ರಯಕ್ಕೆ ಸಿಕ್ಕಿಹಾಕಿಕೊಳ್ಳುತ್ತೇವೆ; ಜನ ಏನಾದರೂ ನಿಮ್ಮ ಮೇಲೆ ಹೇಳಬಹುದು. ಯಾವ ರಾಡಿಯನ್ನಾದರೂ ಸಹ ಯಾರ ಮುಖದ ಮೇಲೆ ಬೇಕಾದರೂ ಎರಚಲಿಕ್ಕೆ ಸಾಧ್ಯವಿದೆ. ಅದನ್ನು ತಪ್ಪಿಸಬೇಕೆಂದು ನಾನು ಪ್ರಾಸ್ತಾವಿಕವಾಗಿ ಹೇಳಿದೆ.

The Ashraya Sites Distribution Committee have stated that about 850 of the total beneficiaries are physically handicapped people living in various parts of the city. The income details of the addressees and the physically hanidcapped medical certificates are not forth-coming in the records. It is not possible to give any opinion on the genuiness or on their eligibility"

ಏಕೆಂದರೆ ಇದು ಸತ್ಯ ಅಲ್ಲ ಎಂದು ಹೇಳಿ ಅದು ಅಂಥವರು ಇಲ್ಲವೇ ಇಲ್ಲ ಎಂದು ಹೇಳುವುದಕ್ಕಾಗುತ್ತದೆಯೇ? So, this is the kind of a report the Divisional Commissioner has given. ಆದರೂ ಕೂಡ ಪ್ರಸ್ತಾವಿಕ ರಿಪೋರ್ಟಿನ ಮೇಲೆ; it is an iterim report. ಪ್ರಸ್ತಾವಿಕ ರಿಪೋರ್ಟಿನ ಮೇಲೆಯೇ ನನಗನ್ನಿಸಿತು, alright, why our Hon. Minister should suffer ಅಪವಾದ ಏತಕ್ಕೆ ಅವರ ಮೇಲೆ ಬರಬೇಕು; ಬೇಡ; ಇದನ್ನೇ ರದ್ದು ಮಾಡೋಣ. Let us cancel it. ತಾವು ಈಗ ಹೇಳಿದಿರಿ ಮದ್ರಾಸ್‌ನವರಿಗೆ ಕೊಟ್ಬಿದ್ದೀರಿ ಎಂದು; Let us verify. Let the Divisional Commissioner can give notice to all the beneficiaries. But it is too premature for your conclusion. ಸನ್ಮಾನ್ಯ ದೇಶಪಾಂಡೆಯವರೇ, ತಾವು ಏನು ಇವತ್ತು ಒಂದು ನಿರ್ಣಯಕ್ಕೆ ಬರುತ್ತಿದ್ದೀರಿ, ಅದಕ್ಕೆ ದಯಮಾಡಿ ಬರಬೇಡಿ. That is not correct. Don't charge unless your charge is well founded. Unless you feel that the charge is well-founded, don't make the charge. You are a very responsible Leader of the opposition. ಹೀಗಿರುವಾಗ ತಾವು ಏನು ಮಾಡದಿದ್ದರೂ ಕೂಡ your statement must have credibility. We believe in your credibility. ಆದ್ದರಿಂದ ಇದನ್ನು ರದ್ದು ಮಾಡಿದ್ದೇವೆ. ಲಿಸ್ಟ್ ಎಲ್ಲಾ ಇದೆಯಲ್ಲಾ, let the Divisional Commissioner go through that list. ಯಾರು ಎಲಿಜಬಲ್ ಇದ್ದಾರೆ, ಯಾರು ಎಲಿಜಬಲ್ ಇಲ್ಲ ಎಂದು ಅವರು ವೆರಿಫೈ ಮಾಡಲಿ. Let me get a final report and give it to you. I don't mind giving it to you. It is only an interim report. She has not gone deep into the whole thing. ಅಲ್ಲಿ ಹೋಗುವಾಗ ಒಂದು ಗ್ಯಾದರಿಂಗ್ ಇತ್ತು, ಅಲ್ಲಿ ಕೆಲವರು

ದುಖದಿಂದ ಮಾತನಾಡಿದರು, ನಾನು ಒಂದು ಒಪ್ಪುತ್ತೇನೆ. ಅಲ್ಲಿ ಯಾರ್ಯಾರು ಪರಿಶಿಷ್ಟ ವರ್ಗದವರು ಇದ್ದಾರೆ, ಅವರಿಗೆ ಆಶ್ರಯ ಕಾರ್ಯಕ್ರಮದಲ್ಲಿ ಏನು ಸೈಟು ಕೊಡಬೇಕು, ಅದು ಸರ್ಕಾರದ ಕರ್ತವ್ಯ ಇದೆ. They must get some priority. I agree with you. ನಿಮ್ಮ ಆ ಕಳಕಳಿಗೆ ನಮ್ಮ ಪೂರ್ತಿ ಅನುಕಂಪ ಖಂಡಿತವಾಗಿಯೂ ಇದ. ಮತ್ತೆ ಬಾಕಿಯದ್ದು ಯಾವುದೂ ಕೂಡ ಇದರಲ್ಲಿ there is no such pointed reference. First of all, when she says we cannot make out from the records whether eligible or not ಈ ಪರಿಸ್ಥಿತಿಯಲ್ಲಿ ನಾವು ಯಾರ ಮೇಲಾದರೂ ಗೂಬೆ ಕೂರಿಸುವುದಕ್ಕೆ ಹೋಗಬೇಕಾದರೆ it crossses the limit of certain credibility. So, let us not go into it further. Let things rest here. I will get further report. ಆ ಲಿಸ್ಟನ್ನೆಲ್ಲಾ ವೆರಿಫೈ ಮಾಡಿಕೊಂಡು ಅವರು ಯಾರಿದ್ದಾರೆ, ಎನಿದ್ದಾರೆ, let here give opportunity to everyone, all the beneficiaries the advantage of hearing. After all ನ್ಯಾಚುರಲ್ ಜಸ್ಟೀಸ್ ಇದೆ. ನೀವೆಲ್ಲಾ ಇನ್‌ಎಲಿಜಬಲ್, ನಾವು ಮಾತ್ರ ಎಲಿಜಬಲ್ ಎಂದು ಹೇಳಿ ಪಟ್ಟಿ ಮಾಡುವುದಕ್ಕೆ ಖಂಡಿತವಾಗಿಯೂ ಆಗುವುದಿಲ್ಲ. ಸಂಪೂರ್ಣವಾದಂಥ ವಿವರ ಸಂಗ್ರಹ ಮಾಡುವುದಕ್ಕೆ ನನಗೆ ಸಾಧ್ಯವಾಗಿಲ್ಲ. ನನ್ನ ಸಿಬ್ಬಂದಿಗಳ ಮುಖಾಂತರ ಆ ವಿವರಗಳನ್ನು ನಾನು ಸಂಗ್ರಹ ಮಾಡುತ್ತೇನೆ; ಮಾಡಬೇಕಾಗುತ್ತದೆ ಎಂಬ ಮಾತನ್ನೇ ವಿಭಾಗಾಧಿಕಾರಿಗಳು ಹೇಳುವಾಗ ಇಲ್ಲ, ಅದು ಬೇಕಾಗಿಲ್ಲ ಎಲ್ಲಾ ಲಂಚ ತೆಗೆದುಕೊಂಡು ಮಾಡಿದ್ದಾರೆ, ಅಂಗವಿಕಲರು ಯಾರೂ ಇಲ್ಲ, ಎಲ್ಲಾ ಮದ್ರಾಸ್‌ನವರಿಗೆ ಮಾಡಿದ್ದಾರೆ, ಈ ತರಹ ಒಂದು ಎಕ್ಸ್‌ಸ್ಟ್ರೀಮ್ ಪೋಸಿಷನ್ ತೆಗೆದುಕೊಳ್ಳಬೇಕಾದಂಥ ವಿಚಾರದಲ್ಲಿ ಯಾವುದೇ ಬೇಸಿಸ್ ಇಲ್ಲ. ಅದಕ್ಕೆ ಬೇಕಾದಂಥ ಮಾಹಿತಿ ಇಲ್ಲ, ದಾಖಲೆಗಳು ಕೂಡ ಇಲ್ಲ. ದಾಖಲೆಗಳು ಇಲ್ಲದೇ ಇದ್ದಾಗ ಬರೀ ಕೆಲವರು ಹೇಳುತ್ತಾರೆ ಎಂಬ ಹೇಳಿಕೆಯ ಮೇಲೆ ಇವರು ಹಣ ತೆಗೆದು ಕೊಂಡು ಕೊಟ್ಟಿದ್ದಾರೆ, ಮದ್ರಾಸ್‌ನವರಿಗೆ ಕೊಟ್ಟಿದ್ದಾರೆ ಎಂದು ಹೇಳಿ ನಾವು ನೇರವಾಗಿ ಅಪಾದನೆ ಮಾಡಬೇಕಾದರೆ ಅಪಾದನೆ ಹಿಡಿಯಬೇಕಲ್ಲಾ, ಅದು ಖಂಡಿತವಾಗಿ ಕೂಡ ಆ ಅಪಾರ ನೆಗೆ ಯಾವ ಆಧಾರ ಕೂಡ ಇಲ್ಲದಿದ್ದರೆ ಆ ಅಪಾದನೆಗಳನ್ನು ಮತ್ತೂ ಕೂಡ ಮುಂದುವರಿಸಿಕೊಂಡು ಹೋಗಬೇಕಾದಂಥ ಅವಶ್ಯಕತೆ ಇಲ್ಲ. ಆದ್ದರಿಂದ ಈ ಕೇಸ್‌ನ ವಿಚಾರ ಏನು ಹೇಳಿದ್ದೀರಿ, ಆ ಕೇಸ್ ಯಾವ್ಯಾವುದು ಇದೆ, ಅದನ್ನು ಸ್ಕ್ರೀನ್ ಮಾಡುವುದಕ್ಕೆ I will ask the Commissioner of police. ಯಾವ್ಯಾವ ಕೇಸ್‌ಗಳಿವೆ ಅನಾವಶ್ಯಕವಾಗಿ ಬಿದ್ದಿವೆ ಅದನ್ನು ಸ್ಕ್ರೀನ್ ಮಾಡುವುದಕ್ಕೆ ಖಂಡಿತವಾಗಿಯೂ ಕೂಡ ಪೋಲೀಸ್ ಕಮಿಷನರ್‌ಗೆ ಹೇಳುತ್ತೇನೆ. ಸನ್ಮಾನ್ಯ ಸದಸ್ಯರು ಜನಗಳಿಂದ ಎಲೆಕ್ಟ್ ಆಗಿ ಬಂದಂಥವರು ನಾವು ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಸಾರ್ವಜನಿಕ ಅಧಿಕಾರವನ್ನು ತೆಗೆದುಕೊಳ್ಳುತ್ತೇವೆ. ಹಾಗೆ ಇರುವಾಗ definitely we are exposed to lot of hazards of this criticism. ಆದರೆ, ಅದನ್ನು ನಾವು ಆಲೋಚನೆ ಮಾಡಿಕೊಳ್ಳಬೇಕಾದರೆ ಆ ಪರಿಸ್ಥಿತಿ ನಿಮಗೂ ಬರಬಹುದು. ನನಗೂ ಬರಬಹುದು, ಕೃಷ್ಣಪ್ಪನವರಿಗೂ ಬರಬಹುದು, ಮತ್ತೊಬ್ಬರಿಗೂ ಕೂಡ

ಬರಬಹುದು. ಆದ್ದರಿಂದ ಈ ದಿಸೆಯಲ್ಲಿ ಸರಿಯಾಗಿ ಚಿಂತನೆ ಮಾಡೋಣ. ಯಾರಾದರೂ ಇದರಲ್ಲಿ ತಪ್ಪಿತಸ್ಥರು ಇದ್ದರೆ ಅವರನ್ನು ರಕ್ಷಣೆ ಮಾಡತಕ್ಕಂಥ ಕೆಲಸವನ್ನು ನಾವು ಇಲ್ಲಿ ಮಾಡುವುದಕ್ಕಾಗುವುದಿಲ್ಲ. ಅದನ್ನು ನೀವು ಮಾಡಬಾರದು. I agree with you. But I can understand your anguish in the whole issue. I can understand and I appreciate your anguish. That is why after having understood this question, we have cancelled this alotment. ಈಗ ಯಾರ್ಯಾರಿಗೆ ಅಲಾಟ್‌ಮೆಂಟ್ ಮಾಡಿದೆ, ಅವರ ಪಟ್ಟಿ ತಯಾರು ಮಾಡಿ, ಅದರಲ್ಲಿ ಯಾರ್ಯಾರು ಎಲಿಜಬಲ್ ಇದ್ದಾರೆ, let us screen them. whoever is eligible, let us give it to them. If they are really handicapped people, as you agreed, let us allot sites to them also. ಆದ್ದರಿಂದ let us rest it. ಅದು ಏನು ಆಗಿದೆ ಜನಗಳ ಭಾವನೆಯಲ್ಲಿ ಏನೋ ವಿಭಾಗಾಧಿಕಾರಿಗಳು ವರದಿ ಕೊಟ್ಟಿದ್ದಾರೆ; ಏನೋ ಅಲ್ಲಿ ನಡೆದಿದೆ ಎನ್ನುವ ಭಾವನೆ ಅಲ್ಲಿ ಏನು ಇದೆ, ಆ ಭಾವನೆಗೆ ಯಾವ ಆಧಾರವೂ ಇಲ್ಲ. ಆದ್ದರಿಂದ I am asking the Divisional Commissioner to scrutinise the entire list nd let it be given to the Government. ಏಕೆ ಆತುರ? Even if you want to hang somebody, you wait for a day. ತಮಗೆ ಕೃಷ್ಣಪ್ಪನವರ ಮೇಲೆ ಏನೂ ವೈಯುಕ್ತಿಕವಾದ ದ್ವೇಷ ಇಲ್ಲ. ನನಗೂ ಕೂಡ ಅಂತಹ ವೈಯಕ್ತಿಕವಾದ ವ್ಯಾಮೋಹ ಇಲ್ಲ. ಆದ್ದರಿಂದ ಈ ವಿಚಾರವನ್ನು ಇಲ್ಲಿಗೇ ಬಿಡೋಣ. ಅಸ್ ಎ ಚೀಫ್ ಮಿನಿಸ್ಟರ, ನನಗೆ ಯಾವ ರೀತಿ ವೈಯಕ್ತಿಕ ವ್ಯಾಮೋಹ ಇಲ್ಲ. As Moily I may have some personal love and affection to somebody and including Mr. Krishnappa. But as a Chief Minister I am little dispassionate.

ಶ್ರೀ ವಾಟಾಳ್ ನಾಗರಾಜ್ : ತಮ್ಮದು ಎರಡು ಪಾತ್ರ.

ಶ್ರೀ ಎಂ. ವೀರಪ್ಪ ಮೊಯಿಲಿ : ಎರಡು ಪಾತ್ರ ಇರುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ದಯಮಾಡಿ ಕೇಳಿ. ಇಲ್ಲಿ ಏನು ಇದೆ. ಮಾನ್ಯ ಮುಖ್ಯಮಂತ್ರಿಗಳು ನನಗೆ ಯಾರನ್ನೂ ಪ್ರೊಟೆಸ್ಟ್ ಮಾಡುವ ಇಂಟರೆಸ್ಟ್ ಇಲ್ಲ ಎಂದು ಹೇಳಿದರು. ಈ ಮಾತನ್ನು ಅವರು ಪ್ರತಿ ಒಂದು ಯಾವುದೇ ಸ್ಕ್ಯಾಂಡಲ್ ರೈಸ್ ಆದಾಗ, ಯಾವುದೇ ವಿಚಾರದಲ್ಲಿ ನನಗೆ ಪ್ರೊಟೆಸ್ಟ್ ಮಾಡುವ ಇಚ್ಛೆ ಇಲ್ಲ ಎಂದು ಹೇಳುತ್ತಾರೆ; ಸಂತೋಷ ನಾನು ನಿಮ್ಮ ಬೊನಾಫೈಡ್ ಛಾಲೆಂಜ್ ಮಾಡುವುದಕ್ಕೆ ಇವತ್ತು ಹೊರಟಿಲ್ಲ. ನಾನು ನಿಮಗೆ ಏನು ಕೇಳುತ್ತಿದ್ದೇನೆ ಅಂದರೆ 1300 ಚಿಲ್ಲರೆ ಲಿಸ್ಟ್ ಇದೆಯಲ್ಲ ಆ ಲಿಸ್ಟ್ ತಮಗೂ ಕಳಿಸಿದ್ದೇನೆ. ಆ ಲಿಸ್ಟ್ ನನ್ನ ಕಡೆಗೂ ಇದೆ. ಆ ಲಿಸ್ಟ್ ಒಂದನ್ನು

ಮಾನ್ಯ ವೀರಪ್ಪ ಮೊಯಿಲಿ ಅವರಿಗೂ ಕಳಿಸಿದ್ದೇನೆ. ನನ್ನ ಕಡೆಗೂ ಇದೆ. ಅದರಲ್ಲಿ ವೀರಪ್ಪ ಮೊಯಿಲಿ ಎಂದು ಇಲ್ಲ. ವೀರಪ್ಪ ಎಂದು ಇದೆ. ಆರ್. ವಿ. ದೇಶಪಾಂಡೆ ಇಲ್ಲ. ರಘುನಾಥ್ ಎಂದು ಇದೆ. ತಾಯಿ ಹೆಸರು ಇಲ್ಲ, ತಂದೆ ಹೆಸರು ಇಲ್ಲ, ಪತ್ತೆ ಇಲ್ಲ. ಈ ತರಹ ಲಿಸ್ಟ್ ಮಾಡುವುದಕ್ಕೆ ಆಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. ಒಂದು ಯೋಜನೆಯನ್ನು ಅನುಷ್ಠಾನಕ್ಕೆ ಕೊಡುವಾಗ ನಿಮ್ಮ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಆಗಲಿ ಅಥವಾ ನನ್ನ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಆಗಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಆ ಲಿಸ್ಟ್‌ನಲ್ಲಿ ತಾಯಿ ಹೆಸರು. ತಂದೆ ಹೆಸರು ಪತ್ತೆ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದಕ್ಕಾಗಿ ಲಿಸ್ಟ್ ಕ್ಯಾನ್ಸಲ್ ಮಾಡಿದೆ.

ಶ್ರೀ ಆರ್. ವಿ. ದೇಶಪಾಂಡೆ : ಕ್ಯಾನ್ಸಲ್ ಅಲ್ಲ. ನಾನು ಏನು ಕೇಳುತ್ತೇನೆ. ನೀವು ತಕ್ಷಣ ಸಿ.ಓ.ಡಿ. ಎನ್‌ಕ್ವೈರಿಗೆ ಒಪ್ಪಿಸಿ. ನಿಮಗೆ ಕಾನ್‌ಫಿಡೆನ್ಸ್ ಇದ್ದರೆ, ನಿಮ್ಮ ಮಂತ್ರಿ ಏನೂ ಮಾಡಿಲ್ಲ ಬಹಳ ಸಜ್ಜನ ಇದ್ದಾರೆ ಎಂಬ ನಂಬಿಕೆ ಇದ್ದರೆ I don't want to dispute that.

Sri M. Veerappa Moily : There is no prima facie case for a COD inquiry. We don't find any criminality involved in it. Unless there is criminality or criminal intention, I am not going to order for a COD inquiry. ಅದಕ್ಕೆ ವಿಭಾಗಾಧಿಕಾರಿಗಳು ಕೇಳಿದ್ದಾರೆ. ಈಗ ನಾವು ಇನ್ನೂ ಮಾಹಿತಿ ಸಂಗ್ರಹ ಮಾಡಬೇಕಾಗಿದೆ. ಅಲ್ಲಿ ವಿಭಾಗಾಧಿಕಾರಿಗಳು ಮಾಹಿತಿ ಸಂಗ್ರಹ ಮಾಡಬೇಕು ಎಂದು ಹೇಳಿದ ಮೇಲೆ, ಆ ಮಾಹಿತಿ ಸಂಗ್ರಹ ಆಗಿಲ್ಲ ಅಥವಾ ಏನಾದರೂ ಕ್ರಿಮಿನಲ್ ಇನ್‌ಟೆನಷನ್ ಇದ್ದರೆ we will not hesitate to take any action.

ಶ್ರೀ ಆರ್. ವಿ. ದೇಶಪಾಂಡೆ : ನೀವು ಯಾವ ಲಿಸ್ಟ್ ನೋಡಿದ್ದೀರಿ. You have rich experience. You have been in this House for so many years. You are senior to us. ಯಾವ ಒಂದು ಲಿಸ್ಟ್ ಕೊಡುವಾಗ ನನ್ನ ಹೆಸರು ರಘುನಾಥ ಎಂದು ಇದೆ, ಅದು ಕರೆಕ್ಟ್ ಇರಬೇಕಿತ್ತು. ವೀರಪ್ಪ ಮೊಯಿಲಿ ಎಂದು ಇರಬೇಕಿತ್ತು; ಆದರೆ ವೀರಪ್ಪ ಎಂದು ಇದೆ. ವೀರಪ್ಪ ಎಂದರೆ ನಾವು ವೀರಪ್ಪ ಮೊಯಿಲಿ ಎಂದು ತಿಳಿದುಕೊಳ್ಳಬೇಕು, ಹಾರ್ನಳ್ಳಿ ಎಂದರೆ ಅದನ್ನು ನಾವು ಹಾರ್ನಳ್ಳಿ ರಾಮಸ್ವಾಮಿ ಎಂದು ತಿಳಿದುಕೊಳ್ಳಬೇಕು. ಏನ್ರೀ ಇದು? ನನಗೆ ಭಯ ಬರುತ್ತಿದೆ. ಒಮ್ಮೆ ಏನೋ ನಮ್ಮ ಮಾನ್ಯ ಯಡಿಯೂರಪ್ಪನವರು ನಿಮಗೆ ಶನಿ ದೆಸೆ ಶುರು ಆಗುತ್ತಿದೆ ಎಂದು ಹೇಳುತ್ತಿದ್ದರು. ಹಾಗಾಗಿ ನನಗೆ ಭಯ ಆಗುತ್ತಿದೆ ತಾವು ಏನು ಮಾತನಾಡುತ್ತಿದ್ದೀರಿ, I know you are trying to protect him. ನಿಮ್ಮ ಮೇಲೆ ಆಪಾದನೆ ಇದೆ.

ಶ್ರೀ ಕೆ. ಹೆಚ್. ರಂಗನಾಥ್ : ಶನಿ ದೆಸೆ ಬಹಳ ಚೆನ್ನಾಗಿ ಇರುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಲಾಸ್ಟ್‌ನಲ್ಲಿ ಚೆನ್ನಾಗಿ ಇರುತ್ತದೆ. ಪ್ರಾರಂಭದಲ್ಲಿ ಬರುತ್ತಾನಲ್ಲಾ, ಆಗ ನಾಶ ಮಾಡಿ ಹೋಗುತ್ತಾನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕೆಲವರಿಗೆ ಕೀರ್ತಿ ಶನಿ ಬರುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಅವರು ಒಳ್ಳೆಯವರು ಎಂಬ ಸಂತೋಷ ಇದೆ. ನಾನು ಹೇಳುತ್ತೇನೆ. ಬಂಗಾರಪ್ಪನವರು ರಮೇಶ್‌ಗೆ ಡಿಫಂಡ್ ಮಾಡಿದಾಗ ಇದೇ ತರಹ ಒಂದು ಅಪಾದನೆ ಅವರ ಮೇಲೆ ಬಂತು. He went to yield and order for an inquiry. ನಿಮ್ಮ ಮೇಲೆ ಒಂದು ಅಪಾದನೆ ಇದೆ. ನಿಮ್ಮ ಮಿನಿಸ್ಟರ್ ಅನ್ನು ಡಿಫೆಂಡ್ ಮಾಡುವುದಿಲ್ಲ ಎಂದು. ನಮ್ಮ ಸ್ನೇಹಿತರು ಮಾನ್ಯ ರೇವಣ್ಣನವರು ಪಾಪ, ಅವರೊಬ್ಬರನ್ನು ಏಕೆ ಬಲಿ ಮಾಡಿದಿರಿ? ಅವರದ್ದು 73ನೇ ಇಸವಿ ಕೇಸ್. 12 ವರ್ಷದ ಕೇಸ್ ಎಂದು ಹೇಳಬಹುದಿತ್ತು. 12 ವರ್ಷದ ಕೇಸ್ ಇದೆ, ಅವರನ್ನು ವಜಾ ಮಾಡುವುದಿಲ್ಲ ಎಂದು ಹೇಳಬಹುದಿತ್ತು; ಆದರೆ ನೀವು ಅವರನ್ನು ಬಲಿ ಮಾಡಿದಿರಿ. ಆದ್ದರಿಂದ ನಿಮ್ಮ ಮೇಲೆ ಪ್ರೆಷರ್ mount ಆಯಿತು;You are not defending you ministers ಎಂದು. ಹಾಗಾಗಿ ಇವತ್ತು ಡಿಫೆಂಡ್ ಮಾಡಿ. You have to defend your colleagues when you are convinced ಇಲ್ಲ, ನನ್ನ ಕಲೀಗ್ ತಪ್ಪು ಮಾಡಿದ್ದಾನೆ, ಇವತ್ತು ಅಲಾಟ್‌ಮೆಂಟ್ ಕ್ಯಾನ್ಸಲ್.

Sri M. Veerappa Moily: As on today, I am not convinced that he has committed any mistake.

Sri R. V. Deshpande : Order for a COD inquiry. There ends the matter.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಹೇಳಿದಿರಿ ಎಂದು ಮಾಡಲೇ? I know why you want it, because you want to protect some politician. You are politicalised the issue.

ಶ್ರೀ ಆರ್. ವಿ. ದೇಶಪಾಂಡೆ : ನಿಮಗೆ ಏಕೆ ಇಷ್ಟು ಸಿಟ್ಟು ಬರುತ್ತದೆ ಇವತ್ತು ? Why are you getting disturbed? What interest I have got in that constituency? Am I going to contest in

that constituency? ಆ ಕ್ಷೇತ್ರವನ್ನು ನಾನು ನೋಡಿಲ್ಲ. Please don't dig your own grave. ನಿಮಗೆ ನಾನು ಎಚ್ಚರಿಕೆ ಕೊಡುತ್ತಿದ್ದೇನೆ.

Sri M. Veerappa Moily : You may try to dig a grave. But it is futfile. You may have to sink yourselves in that.

Sri R. V. Deshpande : You are trying to hide the truth. ಇದು ದೇಶದಲ್ಲಿ ನಡೆಯುವುದಿಲ್ಲ, You can do it for some time. ಆದರೆ ಇದು ಪರ್ಮನೆಂಟ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ವಿರೋಧ ಪಕ್ಷದ ನಾಯಕರು ಇಷ್ಟೊಂದು ರಾಜಕೀಯ ಮಾಡಬಾರದು.

ಶ್ರೀ ಕೆ. ಹೆಚ್. ರಂಗನಾಥ್ : ಎಲ್ಲವನ್ನೂ ಕ್ಯಾನ್ಸೆಲ್ ಮಾಡಿದ ನಂತರ ಮತ್ತೇನು?

ಶ್ರೀ ಎಚ್. ಏಕಾಂತಯ್ಯ : ಹಾಗಾದರೆ, ಇದನ್ನು ರದ್ದುಪಡಿಸುವ ಅವಶ್ಯಕತೆ ಏನಿತ್ತು? ಇದರಲ್ಲಿ ತಪ್ಪಿಲ್ಲವೆಂದು ತಾವು ಭಾವಿಸಿದ್ದರೆ, ಇದನ್ನು ರದ್ದುಪಡಿಸಲು ಕಾರಣವೇನು? ಎರಡನ್ನೂ ಒಂದೇ ಸಲ ಹೇಳಲು ಸಾಧ್ಯವಿಲ್ಲ. ಒಂದು ಸಲ ನಾವು ಕೆಲಸ ಮಾಡಿದ್ದೇವೆಂದು ಹೇಳುತ್ತೀರಿ. ಮತ್ತೊಂದು ಸಲ ಕಾರಣವಿಲ್ಲವೆಂಬ ಮಾತನ್ನು ಹೇಳುತ್ತೀರಿ. ಕಾರಣವಿಲ್ಲವೆಂದು ತಮಗೆ ಮನವರಿಕೆಯಾಗಿದ್ದರೆ ಇದ್ಯಾವುದನ್ನೂ ರದ್ದುಪಡಿಸುವ ಅವಶ್ಯಕತೆ ಇರಲಿಲ್ಲ. ತಾವು ರದ್ದು ಪಡಿಸಿರುವುದಕ್ಕೆ ಏನಾದರೂ ಅವಶ್ಯಕತೆ, ಕಾರಣವಿದೆ. ಆ ಕಾರಣ ತಾವು ಹೇಳಲು ತಯಾರಿಲ್ಲ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ವಜಾ ಮಾಡಿದ್ದು ನೀವು. ಶಹಭಾಷ್‌ಗಿರಿ ಕೊಟ್ಟು ಮುಂದೆ ಮಾತನಾಡಿದರೆ ನಿಮ್ಮ ಮಾತಿಗೆ ಬೆಲೆ ಬರುತ್ತದೆ. ಅದನ್ನು ಬಿಟ್ಟು ಎಲ್ಲವನ್ನೂ ಟೀಕೆ ಮಾಡಿದರೆ ನೀವು ರಾಜಕೀಯ ಮಾಡುತ್ತಿದ್ದೀರೆಂದು ಹೇಳಬೇಕಾಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಪ್ರಾವಿಷನ್ ಅನ್ನು ಯಾರೂ ಬೇಕಾದರೂ ಉಲ್ಲಂಘಿಸಬಹುದು, ನಾವು ರೂಲ್ಸ್ ಪ್ರಕಾರ ಯಾವುದನ್ನೂ ನಿರ್ದಿಷ್ಟ ಪಡಿಸುವುದಕ್ಕಾಗುವುದಿಲ್ಲ, ಅಡ್ರೆಸ್ ಇಲ್ಲದಿದ್ದರೂ ಕೊಡಬಹುದು, ಫಿಸಿಕಲ್ ವೆರಿಫಿಕೇಷನ್ ಸಿಗದವರಿಗೂ ಕೊಡಬಹುದು, ಇನ್‌ಕಂ ಸರ್ಟಿಫಿಕೇಟ್ ಮೆನ್‌ಷನ್ ಮಾಡಬೇಕಾಗಿಲ್ಲವೆಂದು ತಾವೇನು ರಿಪೋರ್ಟ್ ಓದಿ ಹೇಳಿದ್ದೀರಿ. There is no address, there is no income certificate, ಇಂತಹವರಿಗೆಲ್ಲಾ

ಸೈಟುಗಳನ್ನು ಕೊಟ್ಟು ನಮ್ಮನ್ನು ರಾಜಕೀಯ ಮಾಡುತ್ತಿದ್ದೀರೆಂದು ಹೇಳುವಂಥ ಪರಿಸ್ಥಿತಿಗೆ ಯಾವುದೇ ಸರ್ಕಾರ ಬರಬಾರದು. ಇದು ನಾಚಿಕೆಗೇಡು.

ಶ್ರೀ ಬಿ. ಎಚ್. ಬನ್ನಿಕೋಡ್ : ಇವೊತ್ತು ಮಾಡುವುದಕ್ಕೆ ಡಿವಿಜನಲ್ ಕಮಿಷನರ್ ಹೋದರೆ ಅವರ ಪತ್ತೆಯೇ ಇಲ್ಲ. Whereabouts not know ಎಂದು ಹೇಳಿದ್ದಾರೆ. ಪಟ್ಟಾವನ್ನು ಎಂತಹವರಿಗೆ ಕೊಟ್ಟಿದ್ದಾರೆ! ಆನಂತರ, ಆ ಏರಿಯಾದಲ್ಲಿ ಕ್ಯಾನ್ಸೆಲ್ ಮಾಡಿದ್ದಾರೆ, ಇದಕ್ಕೆ ಕಾರಣವೇನು? ಮೇಲ್ನೋಟಕ್ಕೆ ಅಲ್ಲಿ ಲೋಪ-ದೋಷಗಳಿವೆಯೆಂದು ತಿಳಿದುಕೊಂಡು ಕ್ಯಾನ್ಸೆಲ್ ಮಾಡಿರಬೇಕು.

ಶ್ರೀ ಆರ್. ವಿ. ದೇಶಪಾಂಡೆ : ನನ್ನ ಕರ್ತವ್ಯ ನಿಮ್ಮ ಗಮನಕ್ಕೆ ತರುವುದಷ್ಟೆ; I have no powers, I cannot do anything. You have a right. I have my say and you have your own way.

Sri M. Veerappa Moily : But I am not prepared to misuse my power as Chief Minister.

(Interruptions)

Sri R. V. Deshpande : As Chief Minister, you are only protecting your colleagues; You have suppressed the facts.

Sri M. Veerappa Moily : I charge you just to elevate a politician in your party, you are unnecessarily making these changes.

Sri R. V. Deshpande : Alright you say that. I leave it to you. Truth will come out. ಇವೊತ್ತಲ್ಲ ನಾಳೆ ಹೊರ ಬರುತ್ತದೆ. ಇವರು ಸಪ್ರೆಸ್ ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಆದುದರಿಂದ, in protest we are walking out.

(ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್. ವಿ. ದೇಶಪಾಂಡೆ -ಯವರ ನೇತೃತ್ವದಲ್ಲಿ ಜನತಾ ದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಮುಖ್ಯಮಂತ್ರಿಗಳ ಹೇಳಿಕೆ

ವಿಷಯ : ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಲಾಗುವ ರಿಯಾಯಿತಿಗಳ ಮತ್ತು ಪ್ರವಾಹ ಪೀಡಿತ ಪ್ರದೇಶಗಳ ಹಾಗೂ ಪ್ರತಿಕೂಲ ಹವಾಮಾನಕ್ಕೊಳಪಟ್ಟ ಪ್ರದೇಶಗಳ ಇತರ ರೈತರಿಗೆ ನೀಡಲಾಗುವ ರಿಯಾಯಿತಿಗಳ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿ) : ಸನ್ಮಾನ್ಯ ಸಭಾಧ್ಯಕ್ಷರೆ, ರೈತರ ಬಗ್ಗೆ ಒಂದು ಹೇಳಿಕೆ ಕೊಡುವುದಕ್ಕೆ ತಾವು ಅನುಮತಿ ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

(1) ರೈತರು ಪಡೆದುಕೊಂಡಿದ್ದಂತಹ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದು ಕುರಿತಂತೆ ದಿನಾಂಕ 12-3-1993ರಂದು ವಿಧಾನ ಸಭೆಯಲ್ಲಿ ಅರ್ಧ ಘಂಟೆ ಕಾಲ ಚರ್ಚೆ ನಡೆದು ಎರಡೂ ಬದಿಯ ಮಾನ್ಯ ಸದಸ್ಯರುಗಳು ಪ್ರವಾಹ ಮತ್ತು ಇತರ ಪ್ರಕೃತಿ ವಿಕೋಪಗಳಿಗೊಳಪಟ್ಟ ಪ್ರದೇಶಗಳಲ್ಲಿನ ರೈತರ ಅರ್ಥಿಕ ಸಂಕಷ್ಟಗಳ ಬಗ್ಗೆ ವಿಶ್ಲೇಷಿಸಿದರು. ಮುಖ್ಯವಾಗಿ ಕೃಷಿ ಉತ್ಪನ್ನಗಳ ಬೆಲೆ ಇಳಿತದ ಬಗ್ಗೆ ಗಮನ ಸೆಳೆಯುತ್ತ ರೈತರನ್ನು ಸಂಕಷ್ಟದಿಂದ ಪಾರು ಮಾಡಲು ಸೌಲಭ್ಯಗಳನ್ನು ಕಲ್ಪಿಸಬೇಕು ಎಂಬುದಾಗಿ ಮಾನ್ಯ ಸದಸ್ಯರುಗಳು ಒತ್ತಾಯಿಸಿದರು.

(2) ಮಾನ್ಯ ಸದಸ್ಯರುಗಳಿಗೆ ತಿಳಿದಿರುವಂತೆ ಬಡ್ಡಿಯು ಸೇರಿದಂತೆ ಪ್ರತಿ ಪ್ರಕರಣದಲ್ಲಿ ರೂ.10000-00 ಮಿತಿಯವರೆಗೆ ಸಾಲ ಮನ್ನಾ ಮಾಡಲಾದ ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆಯನ್ನು 1989-90ನೇ ಸಾಲಿನಲ್ಲಿ ಭಾರತ ಸರ್ಕಾರವು ಘೋಷಿಸಿದ್ದಿತು. ಈ ಸಾಲ ಮನ್ನಾವನ್ನು ಘೋಷಿಸಿದ್ದಾಗ್ಯೂ ಸಹ ಕರ್ನಾಟಕ ರಾಜ್ಯದಲ್ಲಿ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ಬಾಕಿ ವಸೂಲಾತಿ ಪ್ರಮಾಣ 1989-90ನೇ ಸಾಲಿನಲ್ಲಿ ಉತ್ತೇಜನಕಾರಿಯಾಗಿರಲಿಲ್ಲ. ಅಲ್ಪಾವಧಿ ಸಾಲದ ವಸೂಲಾತಿ ಪ್ರಮಾಣ ಶೇ. 18.65 ಮಧ್ಯಮಾವಧಿ ಸಾಲದ ವಸೂಲಾತಿ ಪ್ರಮಾಣ ಶೇ. 9.24 ಮತ್ತು ದೀರ್ಘಾವಧಿ ಸಾಲದ ವಸೂಲಾತಿ ಪ್ರಮಾಣ ಶೇ.24 ರಷ್ಟಿತ್ತು. ಆದರೆ ಕಾಂಗ್ರೆಸ್(ಐ) ಏತರ ಸರ್ಕಾರಗಳು ಆಳ್ವಿಕೆ ನಡೆಸುತ್ತಿದ್ದ ರಾಜ್ಯಗಳು ಸೇರಿದಂತೆ ಅನೇಕ ರಾಜ್ಯ ಸರ್ಕಾರಗಳು ಕೃಷಿ ಮತ್ತು ಗ್ರಾಮೀಣ ಪತ್ತು ವಿಮೋಚನಾ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಸಂದರ್ಭದಲ್ಲಿ ಬಾಕಿ ಮೊತ್ತವನ್ನು ಬಡ್ಡಿಯೊಂದಿಗೆ ಸಂಬಂಧಪಟ್ಟ ರೈತರು ಮರುಪಾವತಿ ಮಾಡಿದರೆ ಮಾತ್ರ ಸಾಲ ಮನ್ನಾ ಸೌಲಭ್ಯ ಕೊಡುವುದಾಗಿ ರೂಪಿಸಿದ್ದವು. ಹಾಗಾಗಿ ಅವು ಬಹುತೇಕ ಸುಸ್ತಿ ಸಾಲಗಳನ್ನು ತಗ್ಗಿಸಲು ಸಾಧ್ಯವಾಯಿತು. ಆದರೆ ಕರ್ನಾಟಕ ರಾಜ್ಯ ಸರ್ಕಾರವು ಈ ರೀತಿ ಸಾಲ ಮರು ಪಾವತಿಯನ್ನು ಬಡ್ಡಿಯೂ ಸೇರಿದಂತೆ ರೂ.10000-00 ಗಳ ಸಾಲ ಮನ್ನಾ ಮಾಡುವುದಕ್ಕೆ ಸಂಬಂಧವೇರ್ಪಡಿಸಿರಲಿಲ್ಲ. ಹಾಗಾಗಿ ಕರ್ನಾಟಕದಲ್ಲಿ ಸಹಕಾರ ಸಂಸ್ಥೆ ಸುಸ್ತಿ ಪ್ರಮಾಣ ಬಹಳ ಅತೃಪ್ತಿದಾಯಕ ಆಗಿತ್ತು.